# GENERAL TERMS AND CONDITIONS FOR OBTAINING PERSONAL LOANS FROM FINCFRIENDS PRIVATE LIMITED

# ಫಿನ್ಫ್ರೆಂಡ್ಸ್ ಪ್ರೈವೇಟ್ ಲಿಮಿಟೆಡ್‌ದಿಂದ ವೈಯಕ್ತಿಕ ಸಾಲಗಳನ್ನು ಪಡೆದುಕೊಳ್ಳುವುದಕ್ಕಾಗಿ ಸಾಮಾನ್ಯ ಷರತ್ತುಗಳು ಹಾಗೂ ನಿಬಂಧನೆಗಳು

**FINCFRIENDS PRIVATE LIMITED,** a private company limited by shares incorporated under the provisions of the Companies Act, 2013, as amended from time to time engaged in the business of providing personal loans to Individuals as a non-banking financial company registered with Reserve Bank of India, having its corporate office situated at 7th Floor, Vatika Triangle, Mehrauli-Gurgaon Road, Block B, Sushant Lok Phase I, Gurugram, Haryana – 122002 (hereinafter referred as **"FINCFRIENDS"**) may grant the Personal Loan (as defined herein below) only after approval of the prescribed Loan Application submitted by the Borrower to FINCFRIENDS. FINCFRIENDS reserves its right to refuse or reject any Loan Application notwithstanding the Borrower (includes applicant) satisfying the eligibility criteria set by FINCFRIENDS for the approval of the Personal Loan. The Borrower, who intends to obtain a Personal Loan from FINCFRIENDS either once or multiple times, agrees to and shall abide by these general terms and conditions as amended from time to time (hereinafter referred to as **"this Loan GTC"**). The Borrower further agrees to execute such necessary documents or provide such necessary consents, as may be deemed necessary by FINCFRIENDS to give effect to the terms and conditions of this Loan GTC. This Loan GTC as agreed by the Borrower shall be applicable and binding on the Borrower in respect of any and all kinds of Loans approved/ disbursed by FINCFRIENDS in favour of the Borrower.

ಕಾಲಕಾಲಕ್ಕೆ ತಿದ್ದುಪಡಿ ಮಾಡಲ್ಪಟ್ಟಂತೆ, 2013 ರ ಕಂಪನಿಗಳ ಕಾಯ್ದೆಯ ಉಪಬಂಧಗಳಡಿಯಲ್ಲಿ ಸ್ಥಾಪಿಸಲ್ಪಟ್ಟು, ಭಾರತೀಯ ರಿಜರ್ವ್ ಬ್ಯಾಂಕ್ ಬಳಿಯಲ್ಲಿ ನೋಂದಾಯಿಸಲ್ಪಟ್ಟಿರುವ ಒಂದು ಬ್ಯಾಂಕೇತರ ಆರ್ಥಿಕ ಸಂಸ್ಥೆಯಾಗಿ ವ್ಯಕ್ತಿಗಳಿಗೆ ವೈಯಕ್ತಿಕ ಸಾಲಗಳನ್ನು ಒದಗಿಸುವ ವ್ಯವಹಾರದಲ್ಲಿ ತೊಡಗಿಕೊಂಡಿರುವ, ಸೆವೆಂಥ್ ಫ್ಲೋರ್, ವಾಟಿಕಾ ಟ್ರಯಾಂಗಲ್, ಮೆಹ್ರೌಲಿ-ಗುರಗಾಂವ್ ರೋಡ್, ಬ್ಲಾಕ್ ಬಿ, ಸುಶಾಂತ್ ಲೋಕ್ ಫೇಸ್ I, ಗುರುಗ್ರಾಮ್, ಹರ್ಯಾಣ - 122002 ಇಲ್ಲಿ ತನ್ನ ಕಾರ್ಪೊರೇಟ್ ಕಛೇರಿಯನ್ನು ಹೊಂದಿರುವ, ಶೇರುಗಳಿಂದ ಒಂದು ಪ್ರೈವೇಟ್ ಲಿಮಿಟೆಡ್ ಕಂಪನಿ ಆಗಿರುವ **ಫಿನ್ಫ್ರೆಂಡ್ಸ್ ಪ್ರೈವೇಟ್ ಲಿಮಿಟೆಡ್** (ಇಲ್ಲಿಂದಮುಂದೆ "**ಫಿನ್ಫ್ರೆಂಡ್ಸ್**" ಎಂಬುದಾಗಿ ಉಲ್ಲೇಖಿಸಲ್ಪಡುತ್ತದೆ), ಸಾಲಗಾರರಿಂದ ಫಿನ್ಫ್ರೆಂಡ್ಸ್‌ಗೆ ಸಲ್ಲಿಸಲಾದ ಶಿಫಾರಿತ ಅರ್ಜಿ ನಮೂನೆಯು ಅನುಮೋದಿಸಲ್ಪಟ್ಟ ನಂತರವಷ್ಟೇ (ಇದರಲ್ಲಿ ಈಕೆಳಗೆ ವ್ಯಾಖ್ಯಾನಿಸಿರುವಂತೆ) ವೈಯಕ್ತಿಕ ಸಾಲವನ್ನು ಮಂಜೂರು ಮಾಡಬಹುದು. ವೈಯಕ್ತಿಕ ಸಾಲದ ಅನುಮೋದನೆಗಾಗಿ ಫಿನ್ಫ್ರೆಂಡ್ಸ್‌ದಿಂದ ನಿಗದಿ ಮಾಡಲ್ಪಟ್ಟ ಅರ್ಹತಾ ಮಾನದಂಡಗಳನ್ನು ಸಾಲಗಾರರು (ಅರ್ಜಿದಾರರನ್ನೂ ಒಳಗೊಂಡಂತೆ) ಈಡೇರಿಸಿದರೂ ಸಹ ಯಾವುದೇ ಸಾಲದ ಅರ್ಜಿಯನ್ನು ನಿರಾಕರಿಸುವ ಅಥವಾ ತಿರಸ್ಕರಿಸುವ ತನ್ನ ಹಕ್ಕನ್ನು ಫಿನ್ಫ್ರೆಂಡ್ಸ್ ಕಾಯ್ದಿರಿಸುತ್ತದೆ. ಒಂದು ಬಾರಿಯಾಗಲಿ ಅಥವಾ ಹಲವು ಬಾರಿಯಾಗಲಿ, ಫಿನ್ಫ್ರೆಂಡ್ಸ್‌ದಿಂದ ವೈಯಕ್ತಿಕ ಸಾಲವೊಂದನ್ನು ಪಡೆದುಕೊಳ್ಳಲು ಉದ್ದೇಶಿಸುವ ಸಾಲಗಾರರು ಕಾಲಕಾಲಕ್ಕೆ ತಿದ್ದುಪಡಿ ಮಾಡಲ್ಪಡುವಂತೆ ಈ ಸಾಮಾನ್ಯ ಷರತ್ತುಗಳು ಹಾಗೂ ನಿಬಂಧನೆಗಳನ್ನು (ಇಲ್ಲಿಂದಮುಂದೆ "**ಸಾಲದ ಈ ಸಾಷನಿಗಳು**" ಎಂಬುದಾಗಿ ಉಲ್ಲೇಖಿಸಲ್ಪಡುತ್ತದೆ) ಒಪ್ಪುತ್ತಾರೆ ಹಾಗೂ ಅವುಗಳನ್ನು ಪಾಲಿಸತಕ್ಕದ್ದು. ಸಾಲದ ಈ ಸಾಷನಿಗಳ ಷರತ್ತುಗಳು ಹಾಗೂ ನಿಬಂಧನೆಗಳನ್ನು ಅನುಷ್ಠಾನಗೊಳಿಸಲು ಫಿನ್ಫ್ರೆಂಡ್ಸ್‌ದಿಂದ ಅವಶ್ಯಕ ಎಂಬುದಾಗಿ ಪರಿಗಣಿಸಲ್ಪಡುವಂಥ ಅವಶ್ಯಕ ದಾಖಲೆಗಳನ್ನು ಜಾರಿಗೊಳಿಸಲು ಅಥವಾ ಅಂಥ ಅವಶ್ಯಕ ಸಮ್ಮತಿಗಳನ್ನು ಒದಗಿಸಲು ಸಾಲಗಾರರು ಮುಂದುವರೆದು ಒಪ್ಪುತ್ತಾರೆ. ಸಾಲಗಾರರ ಹೆಸರಿನಲ್ಲಿ ಫಿನ್ಫ್ರೆಂಡ್ಸ್‌ದಿಂದ ಅನುಮೋದಿಸಲ್ಪಟ್ಟ / ವಿತರಿಸಲ್ಪಟ್ಟ ಯಾವುದೇ ಮತ್ತು ಎಲ್ಲ ವಿಧಗಳ ಸಾಲಗಳ ಸಂಬಂಧದಲ್ಲಿ ಸಾಲಗಾರರಿಂದ ಒಪ್ಪಿಕೊಳ್ಳಲ್ಪಟ್ಟಂತೆ ಸಾಲದ ಈ ಸಾಷನಿಗಳು ಅನ್ವಯವಾಗತಕ್ಕದ್ದು ಹಾಗೂ ಸಾಲಗಾರರ ಮೇಲೆ ಬಂಧಕವಾಗಿರತಕ್ಕದ್ದು.

| 1. | DEFINITIONS | 1. | **ವ್ಯಾಖ್ಯಾನಗಳು** |
|---|---|---|---|
| | Unless otherwise stated hereinafter or any other Document, the following definitions apply throughout – | | ಇದರಲ್ಲಿ ನಂತರದಲ್ಲಿ ಅಥವಾ ಬೇರಾವುದೇ ದಾಖಲೆಯಲ್ಲಿ ಅನ್ಯಥಾ ತಿಳಿಸಿರುವುದರ ಹೊರತು, ಈ ದಾಖಲೆಯುದ್ದಕ್ಕೂ ಈ ಕೆಳಗಿನ ವ್ಯಾಖ್ಯಾನಗಳು ಅನ್ವಯವಾಗುತ್ತವೆ - |
| 1.1 | "**Alternate Payment Channel**" means the payment mode/ channel | 1.1 | "**ಪರ್ಯಾಯ ಪಾವತಿ ವಾಹಿನಿ**" ಎಂದರೆ ಸಾಲಗಾರರಿಂದ ಮಾಸಿಕ ಕಂತುಗಳು |

| | | | |
|---|---|---|---|
| | either managed by FINCFRIENDS, or by a third party duly authorised by FINCFRIENDS, to receive the Monthly Instalments and/ other dues from the Borrower. | | ಮತ್ತು/ಅಥವಾ ಇತರ ಬಾಕಿಗಳನ್ನು ಸ್ವೀಕರಿಸಲು ನ್ಸಿಫ್ರೆಂಡ್ಸ್‌ದಿಂದಾಗಲಿ ಅಥವಾ ಫಿನ್ಸಿಫ್ರೆಂಡ್ಸ್‌ದಿಂದ ಸೂಕ್ತವಾಗಿ ಅಧಿಕಾರ ನೀಡಲ್ಪಟ್ಟಿರುವ ತೃತೀಯ ಪಕ್ಷವೊಂದರಿಂದಾಗಲಿ ನಿರ್ವಹಿಸಲ್ಪಡುವ ಪಾವತಿಯ ಕ್ರಮ / ವಾಹಿನಿ ಎಂದು ಅರ್ಥ. |
| **1.2** | **"Annual Percentage Rate (APR)"**: means the effective annualised rate charged to the Borrower on a Personal Loan. APR shall be based on an all-inclusive cost and margin including cost of funds, credit cost and operating cost, processing fee, service fees, verification charges, maintenance charges, etc., and exclude contingent charges like early repayment charges, late payment fines, etc. Annual Percentage Rate is computed on Net Disbursed Amount. | **1.2** | **"ವಾರ್ಷಿಕ ಪ್ರತಿಶತ ದರ (ಆ್ಯನ್ಯುವಲ್ ಪರ್ಸೆಂಟ್ ರೇಟ್ - ಎಪಿಆರ್)"**: ಎಂದರೆ ವೈಯಕ್ತಿಕ ಸಾಲವೊಂದರ ಮೇಲೆ ಸಾಲಗಾರರಿಂದ ಆಕರಿಸಲ್ಪಡುವ ಪರಿಣಾಮಕಾರಿ ವಾರ್ಷೀಕರಿಸಿದ ದರ ಎಂದು ಅರ್ಥ. ಮುಂಚಿತ ಮರುಪಾವತಿ ಶುಲ್ಕ, ತಡ ಪಾವತಿ ದಂಡ ಮುಂತಾದವುಗಳಂಥ ಸಾಂದರ್ಭಿಕ ಶುಲ್ಕಗಳನ್ನು ಹೊರತುಪಡಿಸಿ ನಿಧಿಗಳ ಖರ್ಚು, ಕ್ರೆಡಿಟ್ ಖರ್ಚು, ಮತ್ತು ಕಾರ್ಯಾಚರಣಾ ಖರ್ಚು, ಸಂಸ್ಕರಣಾ ಶುಲ್ಕ, ಸೇವಾ ಶುಲ್ಕ, ಪರಿಶೀಲನಾ ಶುಲ್ಕ, ನಿರ್ವಹಣಾ ಶುಲ್ಕ ಮುಂತಾದವುಗಳನ್ನೂ ಒಳಗೊಂಡಂತೆ ಎಲ್ಲವನ್ನೂ ಒಳಗೊಂಡ ಖರ್ಚು ಮತ್ತು ಲಾಭಾಂಶವೊಂದರ ಮೇಲೆ ಎಪಿಆರ್ ಆಧರಿತವಾಗಿರತಕ್ಕದ್ದು. ವಾರ್ಷಿಕ ಪ್ರತಿಶತ ದರವನ್ನು ವಿತರಿಸಿದ ನಿವ್ವಳ ಮೊತ್ತದ ಮೇಲೆ ಲೆಕ್ಕ ಮಾಡಲಾಗುತ್ತದೆ. |
| **1.3** | "**Annualised Rate of Interest**" has the meaning stipulated in Clause 5.1 below. | **1.3** | **"ವಾರ್ಷೀಕರಿಸಿದ ಬಡ್ಡಿಯ ದರ"** ಎಂದರೆ ಈ ಕೆಳಗಿನ ಖಂಡ 5.1 ರಲ್ಲಿ ನಿರ್ದಿಷ್ಟಪಡಿಸಿದ ಅರ್ಥವನ್ನು ಹೊಂದಿದೆ. |
| **1.4** | "**Applicable Law**" shall mean the statute, regulation, notification, circular, ordinance, order, decree, judgment, direction, guideline, or other binding action of any Competent Authority that has the force of law in India. | **1.4** | **"ಅನ್ವಯವಾಗುವ ಕಾನೂನು"** ಎಂದರೆ ಭಾರತದಲ್ಲಿ ಕಾನೂನಿನ ಬಲವನ್ನು ಹೊಂದಿರುವ ಶಾಸನ, ವಿನಿಯಮ, ಅಧಿಸೂಚನೆ, ಸುತ್ತೋಲೆ, ಅಧ್ಯಾದೇಶ, ಆದೇಶ, ಡಿಕ್ರೀ, ತೀರ್ಪು, ನಿರ್ದೇಶನ, ಮಾರ್ಗಸೂಚಿ, ಅಥವಾ ಯಾವುದೇ ಸಕ್ಷಮ ಪ್ರಾಧಿಕಾರದ ಇತರ ಬಂಧಕ ಕ್ರಮ ಎಂದು ಅರ್ಥೈಸತಕ್ಕದ್ದು. |
| **1.5** | "**Automated Fund Transfer**" shall mean and include transfer of funds through ECS (debit), direct debit, ACH (debit), e-NACH, IMPS, UPI or any other permissible mode available from time to time for the purpose of debiting the bank account on the basis of instructions given by the account holder. | **1.5** | **"ಆಟೋಮೇಟೆಡ್ ಫಂಡ್ ಟ್ರಾನ್ಸ್‌ಫರ್"** ಎಂದರೆ ಇಸಿಎಸ್ (ಡೆಬಿಟ್), ಡೈರೆಕ್ಟ್ ಡೆಬಿಟ್, ಎಸಿಹೆಚ್ (ಡೆಬಿಟ್), ಇ-ಎನ್‌ಎಸಿಹೆಚ್, ಐಎಮ್‌ಪಿಎಸ್, ಯುಪಿಐ ಅಥವಾ ಖಾತೆ ಧಾರಕರಿಂದ ನೀಡಲ್ಪಟ್ಟ ನಿರ್ದೇಶನಗಳ ಮೇಲೆ ಆಧರಿತವಾಗಿ ಬ್ಯಾಂಕ್ ಖಾತೆಯನ್ನು ಋಣಿಸುವ ಉದ್ದೇಶಕ್ಕಾಗಿ ಕಾಲಕಾಲಕ್ಕೆ ಲಭ್ಯವಿರುವ ಅನುಮತಿಸಲ್ಪಟ್ಟಿರುವ ಬೇರಾವುದೇ ವಿಧಾನದ ಮೂಲಕ ನಿಧಿಗಳ ವರ್ಗಾವಣೆ ಎಂದು ಅರ್ಥೈಸಿ, ಅವುಗಳನ್ನು ಒಳಗೊಳ್ಳತಕ್ಕದ್ದು. |

| | | | |
|---|---|---|---|
| **1.6** | "**Borrower**" means the individual who applies for and/ or obtains Personal Loan from FINCFRIENDS and whose details are mentioned in Loan Application as applicant. For the purpose of this Loan GTC, the term 'Borrower' shall include his/ her heirs, executors, administrators, assigns and legal representatives. | **1.6** | **"ಸಾಲಗಾರರು"** ಎಂದರೆ ಫಿನ್ಸಿಫ್ರೆಂಡ್ಸ್‌ದಿಂದ ವೈಯಕ್ತಿಕ ಸಾಲಕ್ಕಾಗಿ ಅರ್ಜಿ ಸಲ್ಲಿಸುವ ಮತ್ತು/ಅಥವಾ ಅದನ್ನು ಪಡೆದುಕೊಳ್ಳುವ, ಮತ್ತು ಸಾಲದ ಅರ್ಜಿಯಲ್ಲಿ ಅರ್ಜಿದಾರರು ಎಂಬುದಾಗಿ ನಮೂದಿಸಿರುವ ವಿವರಗಳನ್ನುಳ್ಳ ವ್ಯಕ್ತಿ ಎಂದು ಅರ್ಥ. ಸಾಲದ ಈ ಸಾಷನಿಗಳ ಉದ್ದೇಶಕ್ಕಾಗಿ, ಸಾಲಗಾರರು ಈ ಪದವು ಅವರ ವಾರಸುದಾರರು, ಜಾರಿಕರ್ತರು, ಆಡಳಿತಾಧಿಕಾರಿಗಳು, ನಿಯೋಜಿತರು ಮತ್ತು ಕಾನೂನುಬದ್ಧ ಪ್ರತಿನಿಧಿಗಳನ್ನು ಒಳಗೊಳ್ಳತಕ್ಕದ್ದು. |
| **1.7** | "**Code**" has the meaning defined in Clause 2.9 below. | **1.7** | "**ಕೋಡ್**" ಎಂದರೆ ಈ ಕೆಳಗಿನ ಖಂಡ 2.9 ರಲ್ಲಿ ನಿರ್ದಿಷ್ಟಪಡಿಸಿದ ಅರ್ಥವನ್ನು ಹೊಂದಿದೆ. |
| **1.8** | "**Communication Modes**" has the meaning defined in Clause 7.1 below | **1.8** | **"ಸಂವಹನ ವಿಧಾನಗಳು"** ಎಂದರೆ ಈ ಕೆಳಗಿನ ಖಂಡ 7.1 ರಲ್ಲಿ ನಿರ್ದಿಷ್ಟಪಡಿಸಿದ ಅರ್ಥವನ್ನು ಹೊಂದಿದೆ. |
| **1.9** | "**Competent Authority**" means and includes the Government of India (GoI), Reserve Bank of India (RBI), Financial Intelignece Unit- India, or the government of any other state of India or any ministry, department, local authority, statutory or regulatory authority, instrumentality, agency, corporation (to the extent acting in a legislative, judicial or administrative capacity or commission under the direct or indirect control of the GoI or RBI or the government of any other state of India or any political subdivision of any of them or owned or controlled by the GoI or the RBI or the government of any other state of India or any of their subdivisions, or any court, tribunal or judicial body within India or any legislative, judicial or executive authority, department, Ministry of Public or Statutory Person whether autonomous or not, of the GoI or the RBI. | **1.9** | **"ಸಕ್ಷಮ ಪ್ರಾಧಿಕಾರ"** ಎಂದರೆ ಭಾರತ ಸರ್ಕಾರ (ಜಿಒಐ), ಭಾರತೀಯ ರಿಜರ್ವ್ ಬ್ಯಾಂಕ್ (ಆರ್‌ಬಿಐ), ಆರ್ಥಿಕ ಮಾಹಿತಿ ಘಟಕ - ಭಾರತ, ಅಥವಾ ಭಾರತದ ಬೇರಾವುದೇ ರಾಜ್ಯದ ಸರ್ಕಾರ ಅಥವಾ ಯಾವುದೇ ಸಚಿವಾಲಯ, ಇಲಾಖೆ, ಸ್ಥಳೀಯ ಪ್ರಾಧಿಕಾರ, ಶಾಸನಬದ್ಧ ಅಥವಾ ನಿಯಂತ್ರಕ ಪ್ರಾಧಿಕಾರ, ಸಾಧನತ್ವ, ಸಂಸ್ಥೆ, ನಿಗಮ ಎಂದು ಅರ್ಥೈಸಿ, ಅವುಗಳನ್ನು ಒಳಗೊಳ್ಳುತ್ತದೆ (ಭಾರತ ಸರ್ಕಾರ ಅಥವಾ ಭಾರತೀಯ ರಿಜರ್ವ್ ಬ್ಯಾಂಕ್ ಅಥವಾ ಭಾರತದ ಬೇರಾವುದೇ ರಾಜ್ಯದ ಸರ್ಕಾರ ಅಥವಾ ಅವುಗಳಲ್ಲಿ ಯಾವುದೇ ಒಂದರ ಯಾವುದೇ ರಾಜಕೀಯ ಉಪವಿಭಾಗದ ಪರೋಕ್ಷ ಅಥವಾ ಅಪರೋಕ್ಷ ನಿಯಂತ್ರಣದಡಿಯಲ್ಲಿನ ಅಥವಾ ಭಾರತ ಸರ್ಕಾರ ಅಥವಾ ಭಾರತೀಯ ರಿಜರ್ವ್ ಬ್ಯಾಂಕ್ ಅಥವಾ ಭಾರತದ ಬೇರಾವುದೇ ರಾಜ್ಯದ ಸರ್ಕಾರ ಅಥವಾ ಅವುಗಳ ಯಾವುದೇ ಉಪವಿಭಾಗಗಳಿಂದ ಸ್ವಾಮ್ಯ ವಹಿಸಿಕೊಳ್ಳಲ್ಪಟ್ಟಿರುವ ಅಥವಾ ನಿಯಂತ್ರಿಸಲ್ಪಡುವ ಶಾಸನಾತ್ಮಕ, ನ್ಯಾಯಿಕ ಅಥವಾ ಆಡಳಿತಾತ್ಮಕ ಸ್ಥಾನ ಅಥವಾ ಆಯೋಗವೊಂದರಲ್ಲಿ ವರ್ತಿಸುವ ಮಟ್ಟಿಗೆ ಅಥವಾ ಭಾರತದೊಳಗಿನ ಯಾವುದೇ ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ನ್ಯಾಯಿಕ ಸಂಸ್ಥೆ ಅಥವಾ ಭಾರತ ಸರ್ಕಾರ ಅಥವಾ ಭಾರತೀಯ ರಿಜರ್ವ್ ಬ್ಯಾಂಕಿನ, ಸ್ವಾಯತ್ತವಾಗಿರಲಿ ಇಲ್ಲದಿರಲಿ, ಸಾರ್ವಜನಿಕ |

| | | | |
|---|---|---|---|
| | | | ಅಥವಾ ಶಾಸನಬದ್ಧ ವ್ಯಕ್ತಿಯ ಯಾವುದೇ ಶಾಸನಾತ್ಮಕ, ನ್ಯಾಯಿಕ ಅಥವಾ ಕಾರ್ಯಕಾರಿ ಪ್ರಾಧಿಕಾರ, ಇಲಾಖೆ, ಸಚಿವಾಲಯ). |
| **1.10** | **"Cooling Off Period" or "Look Up Period"** means the period defined in Clause 6.4 below. | **1.10** | **"ಕೂಲಿಂಗ್ ಅವಧಿ"** ಅಥವಾ "ಹುಡುಕಾಟದ ಅವಧಿ" ಎಂದರೆ ಈ ಕೆಳಗಿನ ಖಂಡ 6.4 ರಲ್ಲಿ ವ್ಯಾಖ್ಯಾನಿಸಿರುವ ಅವಧಿಯಾಗಿದೆ. |
| **1.11** | "**Credit Refund**" means:<br>1.11.1 the refund, adjustment or credit reported by the FINCFRIENDS that is credited to Borrower's account with FINCFRIENDS;<br>1.11.2 the cashbacks, rewards, or loyalty benefits, by the FINCFRIENDS that may be converted/ translated to money value for crediting to Borrower's account with FINCFRIENDS. | **1.11** | **"ಕ್ರೆಡಿಟ್ ರಿಫಂಡ್"** ಎಂದರೆ:<br>1.11.1 ಫಿನ್ಸಿಫ್ರೆಂಡ್ಸ್ ಬಳಿಯಲ್ಲಿ ಇರುವ ಸಾಲಗಾರರ ಖಾತೆಗೆ ಜಮಾ ಮಾಡಲ್ಪಟ್ಟ, ಫಿನ್ಸಿಫ್ರೆಂಡ್ಸ್‌ದಿಂದ ವರದಿ ಮಾಡಲ್ಪಟ್ಟ ಮರುಸಂದಾಯ, ಹೊಂದಾಣಿಕೆ ಅಥವಾ ಕ್ರೆಡಿಟ್;<br>1.11.2 ಫಿನ್ಸಿಫ್ರೆಂಡ್ಸ್ ಬಳಿಯಲ್ಲಿ ಇರುವ ಸಾಲಗಾರರ ಖಾತೆಗೆ ಜಮಾ ಮಾಡುವುದಕ್ಕಾಗಿ ಹಣದ ಮೌಲ್ಯವಾಗಿ ಪರಿವರ್ತಿಸಬಹುದಾದ / ಅನುವಾದಿಸಲ್ಪಡಬಹುದಾದ, ಫಿನ್ಸಿಫ್ರೆಂಡ್ಸ್‌ದಿಂದ ನೀಡಲ್ಪಟ್ಟ ಕ್ಯಾಶ್‌ಬ್ಯಾಕ್‌ಗಳು, ರಿವಾರ್ಡ್‌ಗಳು, ಅಥವಾ ಲಾಯಲ್ಟಿ ಬೆನೆಫಿಟ್‌ಗಳು. |
| **1.12** | "**Customer Data**" has the meaning defined in Clause 2.7 below. | **1.12** | **"ಗ್ರಾಹಕ ದತ್ತಾಂಶ"** ಎಂದರೆ ಈ ಕೆಳಗಿನ ಖಂಡ 2.7 ರಲ್ಲಿ ನಿರ್ದಿಷ್ಟಪಡಿಸಿದ ಅರ್ಥವನ್ನು ಹೊಂದಿದೆ. |
| **1.13** | "**Documents**" means Loan Application with this Loan GTC, Sanction Letter, Key Fact Sheet, Mandate, and consent form (as the case may be) executed, agreed, submitted, or accepted by the Borrower, or issued to the Borrower, as the case may be, and all other documents, instruments, certificates, and agreements executed, agreed, accepted, received and/ or submitted by the Borrower or any third party in connection with the Personal Loan, including but not limited to electronic records of any and all of the aforesaid. | **1.13** | **"ದಾಖಲೆಗಳು"** ಎಂದರೆ ಈನಂತರ ತಿಳಿಸುವ ಯಾವುದೇ ಮತ್ತು ಎಲ್ಲ ರೀತಿಯ ಇಲೆಕ್ಟ್ರಾನಿಕ್ ದಾಖಲೆಗಳನ್ನು ಅವುಗಳಿಗಷ್ಟೇ ಸೀಮಿತವಾಗದೇ ಒಳಗೊಂಡಂತೆ, ಸಂದರ್ಭಾನುಸಾರವಾಗಿ, ಸಾಲಗಾರರಿಂದ ಜಾರಿಗೊಳಿಸಲ್ಪಟ್ಟ, ಒಪ್ಪಿಕೊಳ್ಳಲ್ಪಟ್ಟ, ಸಲ್ಲಿಸಲ್ಪಟ್ಟ, ಅಥವಾ ಅಂಗೀಕರಿಸಲ್ಪಟ್ಟ, ಅಥವಾ ಸಾಲಗಾರರಿಗೆ ನೀಡಲ್ಪಟ್ಟ (ಸಂದರ್ಭಕ್ಕೆ ತಕ್ಕಂತೆ) ಸಾಲದ ಈ ಸಾಷನಿಗಳೊಂದಿಗಿನ ಸಾಲದ ಅರ್ಜಿ, ಮಂಜೂರಾತಿ ಪತ್ರ, ಮುಖ್ಯ ವಿಷಯ ಪುಟ, ಮ್ಯಾಂಡೇಟ್, ಮತ್ತು ಸಮ್ಮತಿ ನಮೂನೆ, ಮತ್ತು ಸಾಲಗಾರರಿಂದ ಅಥವಾ ವೈಯಕ್ತಿಕ ಸಾಲದ ಸಂಬಂಧದಲ್ಲಿ ಬೇರಾವುದೇ ತೃತೀಯ ಪಕ್ಷದಿಂದ ಜಾರಿಗೊಳಿಸಲ್ಪಟ್ಟ, ಒಪ್ಪಿಕೊಳ್ಳಲ್ಪಟ್ಟ, ಅಂಗೀಕರಿಸಲ್ಪಟ್ಟ, ಸ್ವೀಕರಿಸಲ್ಪಟ್ಟ ಮತ್ತು/ಅಥವಾ ಸಲ್ಲಿಸಲ್ಪಟ್ಟ |

| | | | |
|---|---|---|---|
| | | | ಇತರ ಎಲ್ಲ ದಾಖಲೆಗಳು, ಪ್ರಮಾಣಪತ್ರಗಳು, ಮತ್ತು ಒಡಂಬಡಿಕೆಗಳು ಎಂದು ಅರ್ಥ. |
| **1.14** | "**Due Date**" means the date on which Monthly Instalment(s) become due for repayment by the Borrower to FINCFRIENDS. | **1.14** | **"ಕೊನೆಯ ದಿನಾಂಕ"** ಎಂದರೆ ಸಾಲಗಾರರಿಂದ ಫಿನ್‌ಫ್ರೆಂಡ್ಸ್‌ಗೆ ಮರುಪಾವತಿಸುವುದಕ್ಕೆ ಯಾವ ದಿನದಂದು ಮಾಸಿಕ ಕಂತು(ಗಳು) ಬಾಕಿ ಆಗುತ್ತವೆಯೋ ಆ ದಿನಾಂಕ ಎಂದು ಅರ್ಥ. |
| **1.15** | **"Early Repayment Charges"** means the charges payable by the Borrower to FINCFRIENDS as a penalty for foreclosure of Personal Loan or repayment of the Outstanding Balance before the completion of the Tenure. | **1.15** | **"ಮುಂಚಿತ ಮರುಪಾವತಿ ಶುಲ್ಕ"** ಎಂದರೆ ವೈಯಕ್ತಿಕ ಸಾಲವನ್ನು ಫೋರ್‌ಕ್ಲೋಜ್ ಮಾಡುವುದಕ್ಕೆ ಅಥವಾ ಅವಧಿಯು ಪೂರ್ಣಗೊಳ್ಳುವುದಕ್ಕೂ ಮೊದಲೇ, ಬಾಕಿ ಆಗಿರುವ ಉಳಿಕೆಮೊತ್ತಗಳನ್ನು ಮರುಪಾವತಿಸುವುದಕ್ಕೆ ಒಂದು ದಂಡವಾಗಿ ಸಾಲಗಾರರಿಂದ ಫಿನ್‌ಫ್ರೆಂಡ್ಸ್‌ಗೆ ಪಾವತಿಸಲ್ಪಡತಕ್ಕ ಶುಲ್ಕ ಎಂದು ಅರ್ಥ. |
| **1.16** | **"Equated Monthly Instalment (EMI)"** has the meaning as defined in Clause 6.1 below. | **1.16** | **"ಸಮಾನ ಮಾಸಿಕ ಕಂತು (ಈಕ್ವೇಟೆಡ್ ಮಂತ್ಲೀ ಇನ್‌ಸ್ಟಾಲ್‌ಮೆಂಟ್ - ಇಎಮ್ಐ)"** ಎಂದರೆ ಈ ಕೆಳಗಿನ ಖಂಡ 6.1 ರಲ್ಲಿ ವ್ಯಾಖ್ಯಾನಿಸಿದಂತೆ ಅರ್ಥವನ್ನು ಹೊಂದಿದೆ. |
| **1.17** | **"Extension Fee"** means the charges payable for the extension of Tenure. | **1.17** | **"ವಿಸ್ತರಣಾ ಶುಲ್ಕ"** ಎಂದರೆ ಸಾಲದ ಅವಧಿಯ ವಿಸ್ತರಣೆಗಾಗಿ ಪಾವತಿಸಲ್ಪಡತಕ್ಕ ಶುಲ್ಕ ಎಂದು ಅರ್ಥ. |
| **1.18** | **"FINCFRIENDS"** has the meaning defined at the preamble hereto. | **1.18** | **"ಫಿನ್‌ಫ್ರೆಂಡ್ಸ್"** ಎಂದರೆ ಇದರಲ್ಲಿರುವ ಪ್ರಸ್ತಾಪದಲ್ಲಿ ವ್ಯಾಖ್ಯಾನಿಸಿದ ಅರ್ಥವನ್ನು ಹೊಂದಿದೆ. |
| **1.19** | **"High Net Worth Individual (HNI)"** means the individual having a net worth of INR 50 million and above or such net worth as prescribed under Applicable Law time to time. | **1.19** | **"ಹೈ ನೆಟ್ ವರ್ಥ್ ಇಂಡಿವಿಜುವಲ್ (ಹೆಚ್‌ಎನ್ಐ)"** ಎಂದರೆ 5 ಕೋಟಿ ರೂಪಾಯಿಗಳು ಮತ್ತು ಮೇಲ್ಪಟ್ಟ ನಿವ್ವಳ ಮೌಲ್ಯವನ್ನು ಅಥವಾ ಕಾಲಕಾಲಕ್ಕೆ ಅನ್ವಯವಾಗುವ ಕಾನೂನಿನಡಿಯಲ್ಲಿ ಶಿಫಾರಸ್ಸು ಮಾಡಿರುವಂಥ ನಿವ್ವಳ ಮೌಲ್ಯವನ್ನು ಹೊಂದಿರುವ ವ್ಯಕ್ತಿ ಎಂದು ಅರ್ಥ. |
| **1.20** | "**Interest**" means the amount charged to the Borrower by FINCFRIENDS as per Clause 5 of this Loan GTC and excludes the penalty, fees, or any service charges/ fees of whatever nature under this Loan GTC. | **1.20** | **"ಬಡ್ಡಿ"** ಎಂದರೆ ಈ ಸಾಲದ ಸಾಷನಿಗಳ ಖಂಡ 5 ಕ್ಕೆ ಅನುಗುಣವಾಗಿ ಫಿನ್‌ಫ್ರೆಂಡ್ಸ್, ಸಾಲಗಾರರಿಂದ ಆಕರಿಸುವ ಮತ್ತು ಈ ಸಾಲದ ಸಾಷನಿಗಳಡಿಯಲ್ಲಿನ ಯಾವುದೇ ಸ್ವರೂಪದ ಯಾವುದೇ ದಂಡ, ಶುಲ್ಕ, ಅಥವಾ ಯಾವುದೇ ಸೇವಾ ಶುಲ್ಕ/ಆಕರಣೆಗಳನ್ನು ಹೊರತುಪಡಿಸಿದ ಮೊತ್ತ. |
| **1.21** | "**IU**" has the meaning defined in Clause 2.9 below. | **1.21** | **"ಐಯು"** ಎಂದರೆ ಈ ಕೆಳಗಿನ ಖಂಡ 2.9 ರಲ್ಲಿ ನಿರ್ದಿಷ್ಟಪಡಿಸಿದ ಅರ್ಥವನ್ನು ಹೊಂದಿದೆ. |

| | | | |
|---|---|---|---|
| 1.22 | **"Key Fact Statement" or "KFS"** means the statement issued by FINCFRIENDS to the Borrower, in a format specified by Reserve Bank of India time to time, containing, apart from other necessary information, the details of APR, the recovery mechanism, details of grievance redressal officer, the cooling-off/ look-up period and all the fees and charges payable by the Borrower in respect of the Personal Loan availed, or to be availed, from the FINCFRIENDS. FINCFRIENDS shall not charge any fees or charges to the Borrower if the same is not mentioned in the KFS. | 1.22 | **"ಮುಖ್ಯ ವಿಷಯಗಳ ವಿವರಣೆ, ಕೀ ಫ್ಯಾಕ್ಟ್ಸ್ ಸ್ಟೇಟ್ಮೆಂಟ್"** ಅಥವಾ "ಕೆಎಫ್‌ಎಸ್" ಎಂದರೆ ಇತರ ಅಗತ್ಯ ಮಾಹಿತಿಯನ್ನಲ್ಲದೇ, ಎಪಿಆರ್ ವಿವರಗಳು, ವಸೂಲಾತಿ ವ್ಯವಸ್ಥೆ, ದೂರು ನಿವಾರಣಾಧಿಕಾರಿಯ ವಿವರಗಳು, ಕೂಲಿಂಗ್/ಹುಡುಕಾಟದ ಅವಧಿ ಮತ್ತು ಫಿನ್ಸಿಫ್ರೆಂಡ್ಸ್‌ದಿಂದ ಪಡೆದುಕೊಂಡ ಅಥವಾ ಪಡೆದುಕೊಳ್ಳಬೇಕಿರುವ ವೈಯಕ್ತಿಕ ಸಾಲದ ಸಂಬಂಧದಲ್ಲಿ ಸಾಲಗಾರರಿಂದ ಪಾವತಿಸಲ್ಪಡತಕ್ಕ ಎಲ್ಲ ಶುಲ್ಕಗಳು ಹಾಗೂ ಆಕರಣೆಗಳ ವಿವರಗಳನ್ನು ಒಳಗೊಂಡಿರುವ, ಕಾಲಕಾಲಕ್ಕೆ ಭಾರತೀಯ ರಿಜರ್ವ್ ಬ್ಯಾಂಕಿನಿಂದ ಶಿಫಾರಸ್ಸು ಮಾಡಲ್ಪಟ್ಟಿರುವ ನಮೂನೆಯೊಂದರಲ್ಲಿ ಫಿನ್ಸಿಫ್ರೆಂಡ್ಸ್‌ದಿಂದ ಸಾಲಗಾರರಿಗೆ ನೀಡಲ್ಪಟ್ಟ ವಿವರಣೆ. ಯಾವುದೇ ಶುಲ್ಕ ಅಥವಾ ಆಕರಣೆಗಳು ಕೆಎಫ್‌ಎಸ್‌ನಲ್ಲಿ ನಮೂದಿಸಲ್ಪಡದಿದ್ದಲ್ಲಿ, ಫಿನ್ಸಿಫ್ರೆಂಡ್ಸ್ ಸಾಲಗಾರರಿಂದ ಅವುಗಳನ್ನು ಆಕರಿಸತಕ್ಕದ್ದಲ್ಲ. |
| 1.23 | "**Late Payment Fines**" means the charges payable by the Borrower for non-payment, or delay in payment. | 1.23 | **"ತಡ ಪಾವತಿ ದಂಡ"** ಎಂದರೆ ಪಾವತಿಸದಿರುವಿಕೆ, ಅಥವಾ ಪಾವತಿಸುವಲ್ಲಿನ ವಿಳಂಬಕ್ಕಾಗಿ ಸಾಲಗಾರರಿಂದ ಪಾವತಿಸಲ್ಪಡತಕ್ಕ ಶುಲ್ಕಗಳು. |
| 1.24 | "**Loan Application**" means the application submitted by the Borrower to FINCFRIENDS for applying for, and availing of, the Personal Loan and related services, together with all other information, particulars, clarifications and declarations, if any, furnished by the Borrower in connection with the Personal Loan. | 1.24 | **"ಸಾಲದ ಅರ್ಜಿ"** ಎಂದರೆ ವೈಯಕ್ತಿಕ ಸಾಲ ಮತ್ತು ಸಂಬಂಧಿತ ಸೇವೆಗಳಿಗೆ ಅರ್ಜಿ ಸಲ್ಲಿಸುವುದಕ್ಕಾಗಿ, ಮತ್ತು ಅವುಗಳನ್ನು ಪಡೆದುಕೊಳ್ಳಲು, ವೈಯಕ್ತಿಕ ಸಾಲದ ಸಂಬಂಧದಲ್ಲಿ ಸಾಲಗಾರರಿಂದ ಒದಗಿಸಲ್ಪಟ್ಟ ಇತರ ಎಲ್ಲ ಮಾಹಿತಿ, ವಿವರಗಳು, ಸ್ಪಷ್ಟನೆಗಳು ಮತ್ತು ಘೋಷಣೆಗಳೇನಾದರೂ ಇದ್ದಲ್ಲಿ, ಅವುಗಳ ಜೊತೆಯಲ್ಲಿ ಸಾಲಗಾರರಿಂದ ಫಿನ್ಸಿಫ್ರೆಂಡ್ಸ್‌ಗೆ ಸಲ್ಲಿಸಲಾದ ಅರ್ಜಿ. |
| 1.25 | "**Loan Foreclosure Request**" means the request raised by the Borrower through available Communication Modes to foreclose the Personal Loan before the expiry of Tenure. | 1.25 | **"ಸಾಲವನ್ನು ಫೋರ್‌ಕ್ಲೋಜ್ ಮಾಡುವ ಕೋರಿಕೆ"** ಎಂದರೆ ಸಾಲದ ಅವಧಿಯು ತೀರುವುದಕ್ಕೂ ಮೊದಲೇ ವೈಯಕ್ತಿಕ ಸಾಲವನ್ನು ಫೋರ್‌ಕ್ಲೋಜ್ ಮಾಡುವಂತೆ, ಲಭ್ಯವಿರುವ ಸಂವಹನ ಕ್ರಮಗಳ ಮುಖಾಂತರ ಸಾಲಗಾರರಿಂದ ಮಾಡಲ್ಪಟ್ಟ ಕೋರಿಕೆ. |
| 1.26 | "**Maturity Due Date**" is the end date of Personal Loan mentioned in Documents, or an end date prescribed by FINCFRIENDS through a | 1.26 | **"ಪಕ್ವತೆಗೆ ಕೊನೆಯ ದಿನಾಂಕ"** ವು ದಾಖಲೆಗಳಲ್ಲಿ ನಮೂದಿಸಿದ, ವೈಯಕ್ತಿಕ ಸಾಲದ ಮುಕ್ತಾಯ ದಿನಾಂಕವಾಗಿರುತ್ತದೆ, ಅಥವಾ ವೈಯಕ್ತಿಕ ಸಾಲವನ್ನು |

| | | | |
|---|---|---|---|
| | communication to the Borrower using Comunication Modes in case of early termination or foreclosure of the Personal Loan (whichever occurs earlier), by which date the Borrower shall repay the Outstanding Balance. It is clarified that neither Due Date nor Maturity Due Date shall be on a day which is not a Working Day. | | ಮುಂಚಿತವಾಗಿ ಮುಕ್ತಾಯಗೊಳಿಸಿದ ಅಥವಾ ಫೋರ್‌ಕ್ಲೋಜ್ ಮಾಡಿದ ಸಂದರ್ಭದಲ್ಲಿ (ಯಾವುದು ಮೊದಲು ಸಂಭವಿಸುತ್ತದೋ ಅದು) ಸಂವಹನ ಕ್ರಮಗಳನ್ನು ಬಳಸಿಕೊಂಡು ಸಾಲಗಾರರಿಗೆ ಮಾಡಲಾಗುವ ಸಂವಹನವೊಂದರ ಮುಖಾಂತರ ಫಿನ್ಸಿಫ್ರೆಂಡ್ಸ್‌ದಿಂದ ಶಿಫಾರಸ್ಸು ಮಾಡಲ್ಪಟ್ಟ ಒಂದು ಮುಕ್ತಾಯ ದಿನಾಂಕವಾಗಿದ್ದು, ಬಾಕಿ ಆಗಿರುವ ಮೊತ್ತವನ್ನು ಆ ದಿನಾಂಕದೊಳಗೆ ಸಾಲಗಾರರು ಮರುಪಾವತಿಸತಕ್ಕದ್ದಾಗಿರುತ್ತದೆ. ಕೊನೆಯ ದಿನಾಂಕವಾಗಲಿ ಅಥವಾ ಪಕ್ವತೆಗೆ ಕೊನೆಯ ದಿನಾಂಕವಾಗಲಿ ಕೆಲಸದ ದಿನವಲ್ಲದ ದಿನವೊಂದರಂದು ಇರತಕ್ಕದ್ದಲ್ಲ ಎಂಬುದನ್ನು ಸ್ಪಷ್ಟೀಕರಿಸಲಾಗಿದೆ. |
| **1.27** | “**Mandate**” means the instructions given by the Borrower to debit his bank account to make the payment(s) in respect of Personal Loan to FINCFRIENDS through Automated Fund Transfer from time to time. | **1.27** | **“ಮ್ಯಾಂಡೇಟ್”** ಎಂದರೆ ಕಾಲಕಾಲಕ್ಕೆ ಆಟೋಮೇಟೆಡ್ ಫಂಡ್ ಟ್ರಾನ್ಸ್‌ಫರ್ ಮುಖಾಂತರ ಫಿನ್ಸಿಫ್ರೆಂಡ್ಸ್‌ಗೆ ವೈಯಕ್ತಿಕ ಸಾಲದ ಸಂಬಂಧದಲ್ಲಿನ ಪಾವತಿಯನ್ನು(ಗಳನ್ನು) ಮಾಡಲು ತಮ್ಮ ಬ್ಯಾಂಕ್ ಖಾತೆಯನ್ನು ಖಣಿಸಲು ಸಾಲಗಾರರಿಂದ ನೀಡಲ್ಪಟ್ಟಿರುವ ನಿರ್ದೇಶನಗಳು. |
| **1.28** | “**Monthly Instalment**” has the meaning defined in Clause 6.1 | **1.28** | **“ಮಾಸಿಕ ಕಂತು”** ಎಂದರೆ ಖಂಡ 6.1 ರಲ್ಲಿ ನಿರ್ದಿಷ್ಟಪಡಿಸಿದ ಅರ್ಥವನ್ನು ಹೊಂದಿದೆ. |
| **1.29** | **"Net Disbursal Amount"** is the amount arrived after subtracting Processing Fee and other applicable fee and charges levied upfront at the time of loan approval from the amount of Personal Loan. | **1.29** | **"ವಿತರಿಸಿದ ನಿವ್ವಳ ಮೊತ್ತ"** ಎಂದರೆ ಸಾಲವನ್ನು ಅನುಮೋದಿಸುವ ಸಮಯದಲ್ಲಿ ಮುಂಚಿತವಾಗಿ ವಿಧಿಸಲಾಗುವ ಸಂಸ್ಕರಣಾ ಶುಲ್ಕ ಮತ್ತು ಅನ್ವಯವಾಗುವ ಇತರ ಶುಲ್ಕ ಮತ್ತು ಆಕರಣೆಗಳನ್ನು ವೈಯಕ್ತಿಕ ಸಾಲ ಮೊತ್ತದಿಂದ ಕಳೆದ ನಂತರ ಬರುವ ಮೊತ್ತವಾಗಿದೆ. |
| **1.30** | “**Non-Performing Asset**” or “**NPA**” shall mean the loan/ asset declared as NPA by FINCFRIENDS in compliance with the policy of FINCFRIENDS, as amended from time to time. | **1.30** | **“ಕಾರ್ಯಪ್ರದರ್ಶನವಿಲ್ಲದ ಸ್ವತ್ತು (ನಾನ್-ಪರ್ಫಾರ್ಮಿಂಗ್ ಅಸೆಟ್)” ಅಥವಾ “ಎನ್‌ಪಿಎ”** ಎಂದರೆ ಕಾಲಕಾಲಕ್ಕೆ ತಿದ್ದುಪಡಿ ಮಾಡಲ್ಪಟ್ಟಂತೆ, ಫಿನ್ಸಿಫ್ರೆಂಡ್ಸ್‌ನ ನೀತಿಗೆ ಅನುಗುಣವಾಗಿ ಫಿನ್ಸಿಫ್ರೆಂಡ್ಸ್‌ದಿಂದ ಎನ್‌ಪಿಎ ಎಂಬುದಾಗಿ ಘೋಷಿಸಲ್ಪಟ್ಟಿರುವ ಸಾಲ / ಸ್ವತ್ತು ಎಂದು ಅರ್ಥೈಸತಕ್ಕದ್ದು. |
| **1.31** | “**Outstanding Balance**” in respect of Personal Loan availed by the Borrower means the balance of the respective Personal Loan outstanding on a | **1.31** | **“ಬಾಕಿ ಆಗಿರುವ ಉಳಿಕೆಮೊತ್ತ (ಔಟ್‌ಸ್ಟ್ಯಾಂಡಿಂಗ್ ಬ್ಯಾಲನ್ಸ್)”** ಸಾಲಗಾರರಿಂದ ಪಡೆದುಕೊಳ್ಳಲ್ಪಟ್ಟ |

| | | | |
|---|---|---|---|
| | spaecified date along with interest, fees, costs, charges, expenses and all other amounts due and payable by the Borrower to FINCFRIENDS. | | ವೈಯಕ್ತಿಕ ಸಾಲದ ಸಂಬಂಧದಲ್ಲಿ, ಬಡ್ಡಿ, ಶುಲ್ಕಗಳು, ಖರ್ಚುಗಳು, ಆಕರಣೆಗಳು, ವೆಚ್ಚಗಳು ಮತ್ತು ಸಾಲಗಾರರಿಂದ ಬಾಕಿ ಆಗಿ ಫಿನ್ಸಿಫ್ರೆಂಡ್ಸ್‌ಗೆ ಪಾವತಿಸಲ್ಪಡತಕ್ಕ ಇತರ ಎಲ್ಲ ಮೊತ್ತಗಳ ಸಮೇತವಾಗಿ, ನಿರ್ದಿಷ್ಟಪಡಿಸಿದ ದಿನಾಂಕದಂದು ಆಯಾ ವೈಯಕ್ತಿಕ ಸಾಲದ ಬಾಕಿ ಉಳಿಕೆಮೊತ್ತ. |
| **1.32** | **"Overdue Interest"** means the interest charged by FINCFRIENDS for the delinquent period of Personal Loan as per Clause 5.1 | **1.32** | **"ಓವರ್‌ಡ್ಯೂ ಬಡ್ಡಿ"** ಎಂದರೆ ಖಂಡ 5.1 ಕ್ಕೆ ಅನುಸಾರವಾಗಿ ಫಿನ್ಸಿಫ್ರೆಂಡ್ಸ್‌ದಿಂದ ವೈಯಕ್ತಿಕ ಸಾಲದ ತಪ್ಪಿತಸ್ಥ ಅವಧಿಗೆ ಆಕರಿಸಲ್ಪಡುವ ಬಡ್ಡಿ. |
| **1.33** | "**Personal Loan**" shall mean the Loan, disbursed by FINCFRIENDS on a particular date as per the provisions of this Loan GTC directly to the Borrower, the amount of which is not secured by hypothecation of any asset of the Borrower. | **1.33** | **"ವೈಯಕ್ತಿಕ ಸಾಲ"** ಎಂದರೆ ಸಾಲದ ಈ ಸಾಧನಿಗಳ ಉಪಬಂಧಗಳಿಗೆ ಅನುಸಾರವಾಗಿ ನಿರ್ದಿಷ್ಟ ದಿನಾಂಕವೊಂದರಂದು ಫಿನ್ಸಿಫ್ರೆಂಡ್ಸ್‌ದಿಂದ ನೇರವಾಗಿ ಸಾಲಗಾರರಿಗೆ ವಿತರಿಸಲ್ಪಟ್ಟ, ಹಾಗೂ ಅದರ ಮೊತ್ತವು ಸಾಲಗಾರರ ಯಾವುದೇ ಸ್ವತ್ತಿನ ಅಡಮಾನದಿಂದ ಭದ್ರಪಡಿಸಿಕೊಳ್ಳಲ್ಪಡದೇ ಇರುವ ಸಾಲ ಎಂದು ಅರ್ಥೈಸತಕ್ಕದ್ದು. |
| **1.34** | "**Processing Fee**" means the one-time non-refundable fees charged by FINCFRIENDS to the Borrower as stated in the Loan Application for processing the Loan Application of the Borrower. | **1.34** | **"ಸಂಸ್ಕರಣಾ ಶುಲ್ಕ"** ಎಂದರೆ ಸಾಲಗಾರರ ಸಾಲದ ಅರ್ಜಿಯನ್ನು ಸಂಸ್ಕರಿಸುವುದಕ್ಕಾಗಿ ಸಾಲದ ಅರ್ಜಿಯಲ್ಲಿ ತಿಳಿಸಿರುವಂತೆ ಸಾಲಗಾರರಿಂದ ಫಿನ್ಸಿಫ್ರೆಂಡ್ಸ್ ಆಕರಿಸುವ ಒಂದು ಬಾರಿಯ ಮರುಸಂದಾಯ ಮಾಡಲಾಗದ ಶುಲ್ಕ. |
| **1.35** | **"RBI"** means the Reserve Bank of India, established under the Reserve Bank of India Act, 1934 | **1.35** | **"ಆರ್‌ಬಿಐ"** ಎಂದರೆ 1934 ರ ಭಾರತೀಯ ರಿಜರ್ವ್ ಬ್ಯಾಂಕ್ ಕಾಯ್ದೆಯಡಿಯಲ್ಲಿ ಸ್ಥಾಪಿಸಲ್ಪಟ್ಟಿರುವ ಭಾರತೀಯ ರಿಜರ್ವ್ ಬ್ಯಾಂಕ್ ಎಂದು ಅರ್ಥ. |
| **1.36** | "**Registered Bank Account**" refers to the active bank account of the Borrower that is registered with FINCFRIENDS for the purpose of fund transfer. | **1.36** | **"ನೋಂದಾಯಿತ ಬ್ಯಾಂಕ್ ಖಾತೆ"** ಎಂದರೆ ನಿಧಿ ವರ್ಗಾವಣೆಯ ಉದ್ದೇಶಕ್ಕಾಗಿ ಫಿನ್ಸಿಫ್ರೆಂಡ್ಸ್ ಬಳಿಯಲ್ಲಿ ನೋಂದಾಯಿಸಲ್ಪಟ್ಟಿರುವ, ಸಾಲಗಾರರ ಸಕ್ರಿಯ ಬ್ಯಾಂಕ್ ಖಾತೆಯನ್ನು ಉಲ್ಲೇಖಿಸುತ್ತದೆ. |
| **1.37** | **"Sanction Letter"** means the communication by FINCFRIENDS through any of the Communication Modes stating the important terms | **1.37** | **"ಮಂಜೂರಾತಿ ಪತ್ರ"** ಎಂದರೆ ಸಾಲಗಾರರಿಗೆ ವೈಯಕ್ತಿಕ ಸಾಲದ ಮಂಜೂರಾತಿಗೆ ಸಂಬಂಧಿಸಿದ ಪ್ರಮುಖ ಷರತ್ತುಗಳು ಹಾಗೂ ನಿಬಂಧನೆಗಳನ್ನು ತಿಳಿಸುತ್ತಾ ಯಾವುದೇ |

| | | | |
|---|---|---|---|
| | and conditions relating to the grant of Personal Loan to the Borrower. | | ಸಂವಹನ ಕ್ರಮಗಳ ಮುಖಾಂತರ ಫಿನ್ನಿಫ್ರೆಂಡ್ಸ್‌ದಿಂದ ಮಾಡಲಾಗುವ ಸಂವಹನ. |
| **1.38** | **"Service Fees"** is a non-refundable charge levied to the Borrower on disbursal of the Loan. This fee is charged for maintaining, securing and archiving the Documents related to the Borrower for a statutorily defined period, maintaining wide range of repayment channel options for the Borrower's convenience, performing reporting obligations about Customer Data to various institutions and for maintaining adequate infrastructure in customer service facilitation. | **1.38** | **"ಸೇವಾ ಶುಲ್ಕ"** ಎಂದರೆ ಸಾಲವನ್ನು ವಿತರಣೆ ಮಾಡಿದಾಗ ಸಾಲಗಾರರಿಗೆ ವಿಧಿಸಲ್ಪಡುವ ಮರು-ಸಂದಾಯ ಮಾಡಲಾಗದ ಶುಲ್ಕ. ಶಾಸನಾತ್ಮಕವಾಗಿ ವ್ಯಾಖ್ಯಾನಿಸಲ್ಪಟ್ಟ ಅವಧಿಯವರೆಗೆ ಸಾಲಗಾರರಿಗೆ ಸಂಬಂಧಿಸಿದ ದಾಖಲೆಗಳ ನಿರ್ವಹಣೆ, ಪಡೆದುಕೊಳ್ಳುವಿಕೆ ಮತ್ತು ಸಂಗ್ರಹಿಸಿ ಇರಿಸಿಕೊಳ್ಳುವುದಕ್ಕೆ, ಸಾಲಗಾರರ ಅನುಕೂಲತೆಗಾಗಿ ಮರುಪಾವತಿ ವಾಹಿನಿ ಆಯ್ಕೆಗಳ ವಿಶಾಲ ಶ್ರೇಣಿಯ ನಿರ್ವಹಣೆಗೆ, ಹಲವಾರು ಸಂಸ್ಥೆಗಳಿಗೆ ಗ್ರಾಹಕ ದತ್ತಾಂಶದ ಬಗೆಗಿನ ಬಾಧ್ಯತೆಗಳನ್ನು ವರದಿ ಮಾಡುವ ಕಾರ್ಯಪ್ರದರ್ಶನಕ್ಕೆ ಮತ್ತು ಗ್ರಾಹಕ ಸೇವೆಯನ್ನು ಸುಗಮಗೊಳಿಸುವಲ್ಲಿ ಸಮರ್ಪಕ ಮೂಲಸೌಕರ್ಯದ ನಿರ್ವಹಣೆಗೆ ಈ ಶುಲ್ಕವನ್ನು ಆಕರಿಸಲಾಗುತ್ತದೆ. |
| **1.39** | "**Tenure**" means the period within which Personal Loan granted to the Borrower needs to be repaid by the Borrower and may include the period until the amount of Personal Loan is completely paid by the Borrower. | **1.39** | **"ಅವಧಿ"** ಎಂದರೆ ಸಾಲಗಾರರಿಗೆ ಮಂಜೂರು ಮಾಡಲ್ಪಟ್ಟಿರುವ ವೈಯಕ್ತಿಕ ಸಾಲವು ಯಾವ ಅವಧಿಯೊಳಗೆ ಸಾಲಗಾರರಿಂದ ಮರುಪಾವತಿಸಲ್ಪಡಬೇಕಿದೆಯೋ ಆ ಅವಧಿ ಎಂದು ಅರ್ಥ ಮತ್ತು ವೈಯಕ್ತಿಕ ಸಾಲದ ಮೊತ್ತವು ಸಾಲಗಾರರಿಂದ ಸಂಪೂರ್ಣವಾಗಿ ಪಾವತಿಸಲ್ಪಡುವವರೆಗಿನ ಅವಧಿಯನ್ನು ಒಳಗೊಳ್ಳಬಹುದು. |
| **1.40** | **"Total Amount to be paid by Borrower"** is the amount payable by Borrower estimated as on date as the sum of Loan Amount, Interest Amount, Processing Fee and Service Fee, as applicable, but does not include any contingent charges or any other amount which may become payable due to change in terms and conditions of the Personal Loan or pursuant to any order or direction received under Applicable Law from time to time. | **1.40** | **"ಸಾಲಗಾರರಿಂದ ಪಾವತಿಸಲ್ಪಡಬೇಕಿರುವ ಒಟ್ಟು ಮೊತ್ತ"** ವು ಅನ್ವಯವಾಗುವ ದಿನಾಂಕದಂದಿನಂತೆ, ಸಾಲದ ಮೊಬಲಗು, ಬಡ್ಡಿ ಮೊಬಲಗು, ಸಂಸ್ಕರಣಾ ಶುಲ್ಕ ಮತ್ತು ಸೇವಾ ಶುಲ್ಕದ ಮೊತ್ತದಂತೆ ಅಂದಾಜಿಸಲ್ಪಟ್ಟ, ಸಾಲಗಾರರಿಂದ ಪಾವತಿಸಲ್ಪಡತಕ್ಕ, ಆದರೆ ಯಾವುದೇ ಸಾಂದರ್ಭಿಕ ಶುಲ್ಕಗಳು ಅಥವಾ ವೈಯಕ್ತಿಕ ಸಾಲದ ಷರತ್ತುಗಳು ಹಾಗೂ ನಿಬಂಧನೆಗಳಲ್ಲಿನ ಬದಲಾವಣೆಯಿಂದಾಗಿ ಅಥವಾ ಕಾಲಕಾಲಕ್ಕೆ ಅನ್ವಯವಾಗುವ ಕಾನೂನಿನಡಿಯಲ್ಲಿ ಸ್ವೀಕರಿಸಲ್ಪಟ್ಟ ಯಾವುದೇ ಆದೇಶ ಅಥವಾ ನಿರ್ದೇಶನಕ್ಕೆ ಅನುಸಾರವಾಗಿ ಪಾವತಿಸಲ್ಪಡತಕ್ಕದಾಗಬಹುದಾದ ಬೇರಾವುದೇ ಮೊತ್ತವನ್ನು ಒಳಗೊಳ್ಳದ ಮೊತ್ತವಾಗಿರುತ್ತದೆ. |

| | | | |
|---|---|---|---|
| **1.41** | **"Website"** means the website of the FINCFRIENDS, presently being www.fincfriends.com. | **1.41** | **"ವೆಬ್‌ಸೈಟ್"** ಎಂದರೆ ಪ್ರಸ್ತುತದಲ್ಲಿ www.fincfriends.com ಆಗಿರುವ ಫಿನ್ಸಿಫ್ರೆಂಡ್ಸ್‌ನ ವೆಬ್‌ಸೈಟ್. |
| **1.42** | "**Working Day**" means a day which is not a holiday, Sunday or second/ fourth Saturday of the calendar month for the banks providing banking services to FINCFRIENDS. | **1.42** | **"ಕೆಲಸದ ದಿನ"** ಎಂದರೆ ಫಿನ್ಸಿಫ್ರೆಂಡ್ಸ್‌ಗೆ ಬ್ಯಾಂಕಿಂಗ್ ಸೇವೆಗಳನ್ನು ಒದಗಿಸುವ ಬ್ಯಾಂಕುಗಳಿಗೆ ಕ್ಯಾಲೆಂಡರ್ ತಿಂಗಳಿನ ರಜಾದಿನ, ಭಾನುವಾರ ಅಥವಾ ಎರಡನೇ/ನಾಲ್ಕನೇ ಶನಿವಾರವಾಗಿರದ ಒಂದು ದಿನ. |
| **2.** | **DECLARATIONS BY THE BORROWER** | **2.** | **ಸಾಲಗಾರರಿಂದ ಘೋಷಣೆಗಳು** |
| **2.1** | By submitting the Loan Application, the Borrower represents that the Borrower satisfies the following criteria (**'Basic Eligibility Criteria'**) specified by FINCFRIENDS for the Borrower to apply for Personal Loan:<br>2.1.1 The Borrower is a citizen of India, person resident in India and competent to execute and submit Loan Application and all other Documents for the purpose of availing loan, creation of security and representing generally for all the purposes mentioned/ required to be done for these presents.<br>2.1.2 The Borrower is a person of sound mind, has attained the age of majority and he/ she is not disqualified under any law to engage in a contract at the time of submitting the Loan Application or anytime thereafter.<br>2.1.3 The Borrower has a valid and active source of income to repay all amounts in respect of Personal Loan duly on time. | **2.1** | ಸಾಲದ ಅರ್ಜಿಯನ್ನು ಸಲ್ಲಿಸುವ ಮೂಲಕ, ವೈಯಕ್ತಿಕ ಸಾಲಕ್ಕೆ ಅರ್ಜಿ ಸಲ್ಲಿಸಲು ಸಾಲಗಾರರಿಗಾಗಿ ಫಿನ್ಸಿಫ್ರೆಂಡ್ಸ್ ನಿರ್ದಿಷ್ಟಪಡಿಸಿರುವ ಈ ಕೆಳಗಿನ ಮಾನದಂಡಗಳನ್ನು (**'ಮೂಲ ಅರ್ಹತಾ ಮಾನದಂಡಗಳು'**) ಸಾಲಗಾರರು ಈಡೇರಿಸುತ್ತಾರೆ ಎಂದು ಸಾಲಗಾರರು ಪ್ರತಿನಿಧಿಸುತ್ತಾರೆ:<br>2.1.1 ಸಾಲಗಾರರು ಭಾರತದ ಓರ್ವ ಪ್ರಜೆಯಾಗಿದ್ದಾರೆ, ಭಾರತದಲ್ಲಿ ವಾಸವಿರುವ ವ್ಯಕ್ತಿಯಾಗಿದ್ದಾರೆ ಮತ್ತು ಸಾಲವನ್ನು ಪಡೆದುಕೊಳ್ಳುವ, ಭದ್ರತೆಯನ್ನು ಸೃಷ್ಟಿಸುವ ಮತ್ತು ಈ ಪ್ರಸ್ತುತಿಗಳಿಗೆ ನಮೂದಿಸಿರುವ / ಮಾಡಬೇಕಿರುವ ಎಲ್ಲ ಉದ್ದೇಶಗಳಿಗೆ ಸಾಮಾನ್ಯವಾಗಿ ಪ್ರತಿನಿಧಿಸುವ ಉದ್ದೇಶಕ್ಕಾಗಿ ಸಾಲದ ಅರ್ಜಿ ಮತ್ತು ಇತರ ಎಲ್ಲ ದಾಖಲೆಗಳನ್ನು ಜಾರಿಗೊಳಿಸಿ, ಸಲ್ಲಿಸಲು ಸಕ್ಷಮರಾಗಿದ್ದಾರೆ.<br>2.1.2 ಸಾಲಗಾರರು ಆರೋಗ್ಯವಂತ ಮನಸ್ಸಿನ ಓರ್ವ ವ್ಯಕ್ತಿಯಾಗಿದ್ದಾರೆ, ಪ್ರೌಢ ವಯಸ್ಸನ್ನು ತಲುಪಿದ್ದಾರೆ ಮತ್ತು ಸಾಲದ ಅರ್ಜಿಯನ್ನು ಸಲ್ಲಿಸುವ ಸಮಯದಲ್ಲಿ ಅಥವಾ ಆನಂತರದ ಯಾವುದೇ ಸಮಯದಲ್ಲಿ ಕರಾರೊಂದರಲ್ಲಿ ಪಾಲ್ಗೊಳ್ಳದಂತೆ ಯಾವುದೇ ಕಾನೂನಿನಡಿಯಲ್ಲಿ ಅವರು ಅನರ್ಹಗೊಳಿಸಲ್ಪಟ್ಟಿಲ್ಲ.<br>2.1.3 ವೈಯಕ್ತಿಕ ಸಾಲದ ಸಂಬಂಧದಲ್ಲಿನ ಎಲ್ಲ ಮೊತ್ತಗಳನ್ನು ಸಕಾಲಿಕವಾಗಿ ಮರುಪಾವತಿಸಲು ಮಾನ್ಯವಾದ ಹಾಗೂ ಸಕ್ರಿಯವಾದ ಆದಾಯದ ಮೂಲವೊಂದನ್ನು ಸಾಲಗಾರರು ಹೊಂದಿದ್ದಾರೆ.<br>2.1.4 ಯಾವುದೇ ಮೈಕ್ರೊಫೈನಾನ್ಸ್ ಸಾಲಗಳನ್ನು ಫಿನ್ಸಿಫ್ರೆಂಡ್ಸ್ ಮಂಜೂರು |

| | | | |
|---|---|---|---|
| | 2.1.4 The Borrower understand and agree that FINCFRIENDS doesn't grant any microfinance loans and confirm that his/ her household income (covering income of husband/ wife and unmarried children) is more than Rs. 25,000/- per month. The Borrower further agree that he/ she will not make FINCFRIENDS liable should FINCFRIENDS grants any Personal Loan to the Borrower relying upon this declaration.<br>2.1.5 The Borrower is not a High Net Worth Individual ("HNI"). | | ಮಾಡುವುದಿಲ್ಲ ಎಂಬುದನ್ನು ಸಾಲಗಾರರು ತಿಳಿದುಕೊಂಡು ಅದಕ್ಕೆ ಒಪ್ಪುತ್ತಾರೆ ಮತ್ತು ತಮ್ಮ ಸಾಂಸರಿಕ ಆದಾಯವು (ಪತಿ/ಪತ್ನಿ ಮತ್ತು ಅವಿವಾಹಿತ ಮಕ್ಕಳ ಆದಾಯವನ್ನು ಒಳಗೊಂಡಂತೆ) ಮಾಸಿಕ ರೂ.25,000/- ಗಳಿಗಿಂತ ಹೆಚ್ಚಿಗೆ ಇದೆ ಎಂದು ಧೃಢೀಕರಿಸುತ್ತಾರೆ. ಈ ಘೋಷಣೆಯ ಮೇಲೆ ವಿಶ್ವಾಸವನ್ನಿರಿಸುತ್ತಾ ಸಾಲಗಾರರಿಗೆ ಯಾವುದೇ ವೈಯಕ್ತಿಕ ಸಾಲವನ್ನು ಫಿನ್ಸಿಫ್ರೆಂಡ್ಸ್ ಮಂಜೂರು ಮಾಡಿದಲ್ಲಿ, ಅದಕ್ಕೆ ಫಿನ್ಸಿಫ್ರೆಂಡ್ಸ್ ಅನ್ನು ಅವರು ಬಾಧ್ಯಸ್ಥವಾಗಿಸುವುದಿಲ್ಲ ಎಂಬುದಕ್ಕೆ ಸಾಲಗಾರರು ಮುಂದುವರೆದು ಒಪ್ಪುತ್ತಾರೆ.<br>2.1.5 ಸಾಲಗಾರರು ಓರ್ವ ಹೈ ನೆಟ್ ವರ್ಥ್ ಇಂಡಿವಿಜುವಲ್ ("ಹೆಚ್ಎನ್ಐ") ಅಲ್ಲ. |
| **2.2** | The Borrower makes the following representations and warranties to FINCFRIENDS as of the date of the Loan Application and such representations and warranties shall be repeated on each day until the repayment of the entire Outstanding Balance in full to the satisfaction of FINCFRIENDS:<br>2.2.1 That all consents, permissions and agreements given by the Borrower are given at the free will of the Borrower and his decision is not influenced by coercion, fraud, misrepresentation, or mistake of FINCFRIENDS or any third party.<br>2.2.2 That all the information provided by the Borrower and Documents submitted with the Loan Application are true, genuine and correct and the Borrower further assures that any information demanded by | **2.2** | ಸಾಲದ ಅರ್ಜಿಯ ದಿನಾಂಕದಂದಿನಂತೆ, ಫಿನ್ಸಿಫ್ರೆಂಡ್ಸ್‌ಗೆ ಈ ಕೆಳಗಿನ ಪ್ರಾತಿನಿಧ್ಯಗಳು ಮತ್ತು ಖಾತರಿಗಳನ್ನು ಸಾಲಗಾರರು ಮಾಡು/ನೀಡುತ್ತಾರೆ ಮತ್ತು ಸಂಪೂರ್ಣ ಬಾಕಿ ಉಳಿಕೆಮೊತ್ತವು ಫಿನ್ಸಿಫ್ರೆಂಡ್ಸ್‌ಗೆ ತೃಪ್ತಿಕರವಾಗಿ ಸಂಪೂರ್ಣವಾಗಿ ಮರುಪಾವತಿಸಲ್ಪಡುವವರೆಗೆ ಇಂಥ ಪ್ರಾತಿನಿಧ್ಯಗಳು ಮತ್ತು ಖಾತರಿಗಳು ಪ್ರತಿ ದಿನದಂದು ಪುನರಾವರ್ತಿಸಲ್ಪಡತಕ್ಕದ್ದು:<br><br>2.2.1 ಸಾಲಗಾರರಿಂದ ನೀಡಲ್ಪಟ್ಟಿರುವ ಎಲ್ಲ ಸಮ್ಮತಿಗಳು, ಅನುಮತಿಗಳು ಮತ್ತು ಒಡಂಬಡಿಕೆಗಳು ಮುಕ್ತ ಮನಸ್ಸಿನಿಂದ ನೀಡಲ್ಪಟ್ಟಿವೆ ಮತ್ತು ಅವರ ನಿರ್ಧಾರವು ಫಿನ್ಸಿಫ್ರೆಂಡ್ಸ್ ಅಥವಾ ಯಾವುದೇ ತೃತೀಯ ಪಕ್ಷದ ಯಾವುದೇ ಒತ್ತಾಯ, ವಂಚನೆ, ತಪ್ಪುಪ್ರಾತಿನಿಧ್ಯ, ಅಥವಾ ತಪ್ಪಿನಿಂದ ಪ್ರಭಾವಿತವಾಗಿಲ್ಲ ಎಂದು.<br><br>2.2.2 ಸಾಲಗಾರರಿಂದ ಒದಗಿಸಲ್ಪಟ್ಟಿರುವ ಎಲ್ಲ ಮಾಹಿತಿ ಮತ್ತು ಸಾಲದ ಅರ್ಜಿಯಲ್ಲಿ ಸಲ್ಲಿಸಲ್ಪಟ್ಟಿರುವ ದಾಖಲೆಗಳು ಸತ್ಯವಾಗಿವೆ, ನೈಜವಾಗಿವೆ ಮತ್ತು ಸರಿಯಾಗಿವೆ ಎಂದು ಹಾಗೂ ಫಿನ್ಸಿಫ್ರೆಂಡ್ಸ್‌ದಿಂದ ಭವಿಷ್ಯದಲ್ಲಿ ಬೇಡಲ್ಪಡುವ ಯಾವುದೇ ಮಾಹಿತಿಯು ಸಂಪೂರ್ಣ ನಿಖರತೆಯೊಂದಿಗೆ ಸಾಲಗಾರರಿಂದ ತಕ್ಷಣ ಒದಗಿಸಲ್ಪಡುತ್ತದೆ ಎಂದು ಸಾಲಗಾರರು ಮುಂದುವರೆದು ಭರವಸೆ ನೀಡುತ್ತಾರೆ ಎಂದು.<br><br>2.2.3 ಫಿನ್ಸಿಫ್ರೆಂಡ್ಸ್‌ದಿಂದ ವೈಯಕ್ತಿಕ ಸಾಲವನ್ನು ಪಡೆದುಕೊಳ್ಳುವ ಮೂಲಕ, ಯಾವುದೇ ತೃತೀಯ ಪಕ್ಷದೊಂದಿಗೆ ಸಾಲಗಾರರಿಂದ ಮಾಡಿಕೊಳ್ಳಲ್ಪಟ್ಟಿರುವ ಯಾವುದೇ ಹಾಲಿ ಒಡಂಬಡಿಕೆಯಡಿಯಲ್ಲಿನ ಯಾವುದೇ ಒಪ್ಪಂದಗಳು, ಷರತ್ತುಗಳು ಮತ್ತು ನಿರ್ದಿಷ್ಟತೆಗಳನ್ನು ಸಾಲಗಾರರು ಉಲ್ಲಂಘಿಸುವುದಿಲ್ಲ ಎಂದು.<br><br>2.2.4 ಫಿನ್ಸಿಫ್ರೆಂಡ್ಸ್‌ನ ಅಧೀಕೃತ ವೆಬ್‌ಸೈಟಿನಲ್ಲಿ ಲಭ್ಯವಿರುವ (ಕಾಲಕಾಲಕ್ಕೆ ತಿದ್ದುಪಡಿ |

| | | | |
|---|---|---|---|
| | FINCFRIENDS in the future shall be immediately provided by the Borrower with complete accuracy.<br>2.2.3 That the Borrower does not violate any covenants, conditions and stipulations under any existing agreement entered into by the Borrower with any third party by availing the Personal Loan from FINCFRIENDS.<br>2.2.4 The Borrower confirms that he/ she is submitting this application form after having read and fully understood the Privacy Policy & Interest Rate & Charges Policy (as amended from time to time), available on the official website of the FINCFRIENDS as well as the terms and conditions of availing loan from FINCFRIENDS.<br>2.2.5 The Borrower have no insolvency proceedings against him/ her nor have ever been adjudicated insolvent. The Borrower confirms that no suit for recovery of outstanding dues or monies whatsoever and/or criminal proceedings have been initiated and/or pending against him/ her. There is no restriction on the Borrower in respect of availing the loan from FINCFRIENDS and no person's consent is required by the Borrower for availing the loan from FINCFRIENDS.<br>2.2.6 The loan amount shall not be used for purposes of gambling, lottery, or races, for purchase of gold in any form, gold bullion, gold jewellery, gold coins, units of Exchange Traded Funds (ETF) and units of gold mutual fund, or for any purpose prohibited by Reserve Bank of India or other regulatory body from time to time or any other illegal purposes of similar nature. | | ಮಾಡಲ್ಪಡುವಂತೆ) ಖಾಸಗಿತನದ ನೀತಿ ಮತ್ತು ಬಡ್ಡಿ ದರ ಮತ್ತು ಶುಲ್ಕಗಳ ನೀತಿಯನ್ನು ಹಾಗೂ ಫಿನ್ಸಿಫ್ರೆಂಡ್ಸ್‌ದಿಂದ ಸಾಲವನ್ನು ಪಡೆದುಕೊಳ್ಳುವ ಷರತ್ತುಗಳು ಹಾಗೂ ನಿಬಂಧನೆಗಳನ್ನು ಓದಿ, ಸಂಪೂರ್ಣವಾಗಿ ತಿಳಿದುಕೊಂಡ ನಂತರವೇ ಈ ಅರ್ಜಿ ನಮೂನೆಯನ್ನು ತಾವು ಸಲ್ಲಿಸುತ್ತಿದ್ದಾರೆ ಎಂದು ಸಾಲಗಾರರು ಧೃಢೀಕರಿಸುತ್ತಾರೆ.<br><br>2.2.5 ತಮ್ಮ ವಿರುದ್ಧ ಯಾವುದೇ ಋಣಗ್ರಸ್ತತಾ ಕಲಾಪಗಳನ್ನು ಸಾಲಗಾರರು ಹೊಂದಿಲ್ಲ ಅಥವಾ ಋಣಗ್ರಸ್ತರು ಎಂಬುದಾಗಿ ತಾವು ಎಂದಿಗೂ ನ್ಯಾಯನಿರ್ಣಯಕ್ಕೊಳಪಟ್ಟಿಲ್ಲ. ಯಾವುದೇ ಬಾಕಿ ಮೊತ್ತ ಅಥವಾ ಹಣದ ವಸೂಲಾತಿಗಾಗಿ ಯಾವುದೇ ಮೊಕದ್ದಮೆ ಮತ್ತು/ಅಥವಾ ಕ್ರಿಮಿನಲ್ ಕಲಾಪವು ತಮ್ಮ ವಿರುದ್ಧ ಹೂಡಲ್ಪಟ್ಟಿಲ್ಲ ಮತ್ತು/ಅಥವಾ ಬಾಕಿ ಇಲ್ಲ. ಫಿನ್ಸಿಫ್ರೆಂಡ್ಸ್‌ದಿಂದ ಸಾಲವನ್ನು ಪಡೆದುಕೊಳ್ಳುವ ಸಂಬಂಧದಲ್ಲಿ ಸಾಲಗಾರರ ಮೇಲೆ ಯಾವುದೇ ನಿರ್ಬಂಧನೆ ಇಲ್ಲ ಮತ್ತು ಫಿನ್ಸಿಫ್ರೆಂಡ್ಸ್‌ದಿಂದ ಸಾಲವನ್ನು ಪಡೆದುಕೊಳ್ಳಲು ಸಾಲಗಾರರಿಗೆ ಯಾವುದೇ ವ್ಯಕ್ತಿಯ ಸಮ್ಮತಿಯು ಬೇಕಿರುವುದಿಲ್ಲ ಎಂದು ಸಾಲಗಾರರು ಧೃಢೀಕರಿಸುತ್ತಾರೆ.<br><br>2.2.6 ಸಾಲದ ಮೊತ್ತವನ್ನು ಜೂಜು, ಲಾಟರಿ, ಅಥವಾ ಕುದುರೆಪಂದ್ಯಗಳಿಗೆ, ಅಥವಾ ಯಾವುದೇ ರೂಪದಲ್ಲಿ ಚಿನ್ನ, ಚಿನ್ನದ ಗಟ್ಟಿ, ಚಿನ್ನಾಭರಣ, ಚಿನ್ನದ ನಾಣ್ಯಗಳು, ಎಕ್ಸ್‌ಚೇಂಜ್ ಟ್ರೇಡೆಡ್ ಫಂಡ್ (ಇಟಿಎಫ್) ಯೂನಿಟ್‌ಗಳು ಮತ್ತು ಗೋಲ್ಡ್ ಮ್ಯುಚ್ಯುವಲ್ ಫಂಡ್ ಯೂನಿಟ್‌ಗಳನ್ನು ಖರೀದಿಸುವ ಉದ್ದೇಶಗಳಿಗೆ, ಅಥವಾ ಕಾಲಕಾಲಕ್ಕೆ ಭಾರತೀಯ ರಿಜರ್ವ್ ಬ್ಯಾಂಕಿನಿಂದ ಅಥವಾ ಇತರ ನಿಯಂತ್ರಕ ಸಂಸ್ಥೆಯಿಂದ ನಿಷೇಧಿಸಲ್ಪಟ್ಟಿರುವ ಬೇರಾವುದೇ ಉದ್ದೇಶಕ್ಕೆ ಅಥವಾ ಅದೇ ಸ್ವರೂಪದ ಬೇರಾವುದೇ ಕಾನೂನುಬಾಹಿರ ಉದ್ದೇಶಗಳಿಗೆ ಬಳಸತಕ್ಕದ್ದಲ್ಲ.<br><br>2.2.7 ಸಾಲಗಾರರ ಆರ್ಥಿಕ ಮತ್ತು ಇತರ ವ್ಯವಹಾರಗಳ ಮೇಲೆ ಗುರುತರವಾದ ಪ್ರತಿಕೂಲ ಪರಿಣಾಮವೊಂದನ್ನು ಹೊಂದಿರಬಹುದಾದ ಅಥವಾ ಈ ಸಾಲದ ಸಾಷನಿಗಳ ನೆರವೇರಿಕೆಯ ಮಾನ್ಯತೆಯನ್ನು ಪ್ರಶ್ನಿಸಬಹುದಾದ ಯಾವುದೇ ಕ್ರಮ, ಮೊಕದ್ದಮೆ, ಕಲಾಪ ಅಥವಾ ತನಿಖೆಯು ಸಾಲಗಾರರಿಂದ ಅಥವಾ ಸಾಲಗಾರರ ವಿರುದ್ಧ ಯಾವುದೇ ನ್ಯಾಯಾಲಯ ಅಥವಾ ಯಾವುದೇ ಸರ್ಕಾರಿ ಪ್ರಾಧಿಕಾರದ ಮುಂದೆ ಬಾಕಿ ಅಥವಾ, ಸಾಲಗಾರರ ತಿಳುವಳಿಕೆಯ ಮಟ್ಟಿಗೆ, ಆ ಬೆದರಿಕೆ ಇಲ್ಲ ಎಂದು ಸಾಲಗಾರರು ಧೃಢೀಕರಿಸುತ್ತಾರೆ. ಸಾಲಗಾರರು ಮತ್ತು ಯಾವುದೇ ವ್ಯಕ್ತಿ ಅಥವಾ ಯಾವುದೇ ಸರ್ಕಾರಿ ಪ್ರಾಧಿಕಾರದ ನಡುವೆ ಉದ್ಭವಿಸುವ ಮೂಲಕ ಇದರಡಿಯಲ್ಲಿ ನಿರ್ದಿಷ್ಟಪಡಿಸಿರುವ ರೀತಿಯಲ್ಲಿ ಸಾಲಗಾರರ ಮರುಪಾವತಿ ಬಾಧ್ಯತೆಯನ್ನು ಬಾಧಿಸಬಹುದಾದ ಯಾವುದೇ ತಕರಾರಿನ ಬಗ್ಗೆ ಫಿನ್ಸಿಫ್ರೆಂಡ್ಸ್‌ಗೆ ಸಾಲಗಾರರು ತಡಮಾಡದೇ ತಿಳಿಯಪಡಿಸತಕ್ಕದ್ದು.<br><br>2.2.8 ಈ ದಾಖಲೆಗಳಲ್ಲಿ ನಿರ್ದಿಷ್ಟಪಡಿಸಿರುವಂತೆ, ಸಾಲಗಾರರಿಂದ ಪಾವತಿಸಲ್ಪಟ್ಟ ಮತ್ತು/ಅಥವಾ ಪಾವತಿಸಬೇಕಿರುವುದಾಗಿ ಒಪ್ಪಿಕೊಳ್ಳಲ್ಪಟ್ಟ ಬಡ್ಡಿ |

| | | | |
|---|---|---|---|
| | 2.2.7 The Borrower confirms that there is no action, suit, proceedings or investigation pending or, to the knowledge of the Borrower, is threatened, by or against the Borrower before any Court of Law or any government authority which might have a material adverse effect on the financial and other affairs of the Borrower or which might put into question the validity or performance of this Loan GTC. The Borrower shall intimate FINCFRIENDS promptly of any dispute which might arise between the Borrower and any person or any government authority thereby affecting the repayment obligation of the Borrower in the manner stipulated hereunder.<br>2.2.8 The Borrower acknowledges that the Interest Rate, Late Payment Fines and other fee/ charges paid and/ or agreed to be paid by the Borrower, as specified in the Documents, are reasonable and acceptable to him/ her. | | ದರ, ತಡ ಪಾವತಿ ದಂಡ ಮತ್ತು ಇತರ ಶುಲ್ಕ/ಆಕರಣೆಗಳು ಸಮಂಜಸವಾಗಿದ್ದು, ಅವರಿಗೆ ಅಂಗೀಕಾರಾರ್ಹವಾಗಿವೆ ಎಂದು ಸಾಲಗಾರರು ಅಂಗೀಕರಿಸುತ್ತಾರೆ. |
| **2.3** | The Borrower understand that FINCFRIENDS offers different interest rate to different borrowers based on loan amount, tenor, payment history with FINCFRIENDS, credit score provided by credit information companies, borrower's age, income, type of documents provided by the borrower and any other information as may be required for the purpose of credit evaluation and the Borrower agrees to abide by such rationale. FINCFRIENDS has confirmed that any changes in the rate of interest and fee/ charges shall take effect only prospectively. | **2.3** | ಸಾಲದ ಮೊತ್ತ, ಅವಧಿ, ಫಿನ್ಫ್ರೆಂಡ್ಸ್‌ದೊಂದಿಗಿನ ಪಾವತಿ ಇತಿಹಾಸ, ಕ್ರೆಡಿಟ್ ಇನ್ಫಾರ್ಮೇಶನ್ ಕಂಪನಿಗಳಿಂದ ಒದಗಿಸಲ್ಪಟ್ಟ ಕ್ರೆಡಿಟ್ ಸ್ಕೋರ್, ಸಾಲಗಾರರ ವಯಸ್ಸು, ಆದಾಯ, ಸಾಲಗಾರರಿಂದ ಒದಗಿಸಲ್ಪಟ್ಟ ದಾಖಲೆಗಳ ವಿಧ ಮತ್ತು ಸಾಲದ ಮೌಲ್ಯಮಾಪನದ ಉದ್ದೇಶಕ್ಕೆ ಅಗತ್ಯವಾಗಬಹುದಾದಂತೆ ಬೇರಾವುದೇ ಮಾಹಿತಿ ಇವುಗಳ ಮೇಲೆ ಆಧರಿತವಾಗಿ ಬೇರೆಬೇರೆ ಸಾಲಗಾರರಿಗೆ ಬೇರೆಬೇರೆ ಬಡ್ಡಿ ದರವನ್ನು ಫಿನ್ಫ್ರೆಂಡ್ಸ್ ಪ್ರಸ್ತಾಪಿಸುತ್ತದೆ ಎಂಬುದನ್ನು ಸಾಲಗಾರರು ತಿಳಿದುಕೊಂಡಿದ್ದಾರೆ ಮತ್ತು ಇಂಥ ತಾರ್ಕಿಕತೆಯನ್ನು ಪಾಲಿಸಲು ಸಾಲಗಾರರು ಒಪ್ಪುತ್ತಾರೆ. ಬಡ್ಡಿಯ ದರ ಮತ್ತು ಶುಲ್ಕಗಳು / ಆಕರಣೆಗಳಲ್ಲಿನ ಯಾವುದೇ ಬದಲಾವಣೆಗಳು ಭವಿಷ್ಯವರ್ತಿಯಾಗಿ ಮಾತ್ರ ಜಾರಿಗೆ ಬರತಕ್ಕದ್ದು ಎಂಬುದನ್ನು ಫಿನ್ಫ್ರೆಂಡ್ಸ್ ಧೃಢೀಕರಿಸಿದೆ. |

| | | | |
|---|---|---|---|
| **2.4** | The Borrower confirm that FINCFRIENDS shall be entitled to categorise him/ her under High, Low, Medium or any other risk category based on the aforementioned factors and the loan performance | **2.4** | ಈಮೊದಲು ನಮೂದಿಸಿದ ಅಂಶಗಳು ಮತ್ತು ಸಾಲದ ಕಾರ್ಯಪ್ರದರ್ಶನದ ಮೇಲೆ ಆಧರಿತವಾಗಿ ಅಧಿಕ, ಕಡಿಮೆ, ಮಧ್ಯಮ ಅಥವಾ ಬೇರಾವುದೇ ಅಪಾಯ ವರ್ಗದ ಅಡಿಯಲ್ಲಿ ತಮ್ಮನ್ನು ವರ್ಗೀಕರಿಸಲು ಫಿನ್ಸಿಫ್ರೆಂಡ್ಸ್ ಹಕ್ಕುದಾರವಾಗಿರತಕ್ಕದ್ದು ಎಂಬುದನ್ನು ಸಾಲಗಾರರು ಧೃಢೀಕರಿಸುತ್ತಾರೆ. |
| **2.5** | The Borrower understand and confirm that the Application Form, photograph and all other documents submitted to FINCFRIENDS shall not be returned to the Borrower and FINCFRIENDS shall have the right to retain the same. Further, the Borrower undertake to inform FINCFRIENDS within 7 days of any change in any of the detail mentioned herein. | **2.5** | ಫಿನ್ಸಿಫ್ರೆಂಡ್ಸ್‌ಗೆ ಸಲ್ಲಿಸಲಾದ ಅರ್ಜಿ ನಮೂನೆ, ಭಾವಚಿತ್ರ ಮತ್ತು ಇತರ ಎಲ್ಲ ದಾಖಲೆಗಳನ್ನು ಸಾಲಗಾರರಿಗೆ ಹಿಂದಿರುಗಿಸತಕ್ಕದ್ದಲ್ಲ ಮತ್ತು ಅವುಗಳನ್ನು ಉಳಿಸಿಕೊಳ್ಳುವ ಹಕ್ಕನ್ನು ಫಿನ್ಸಿಫ್ರೆಂಡ್ಸ್ ಹೊಂದಿರುತ್ತದೆ ಎಂಬುದನ್ನು ಸಾಲಗಾರರು ತಿಳಿದುಕೊಂಡು, ಧೃಢೀಕರಿಸುತ್ತಾರೆ. ಮುಂದುವರೆದು, ಇಲ್ಲಿ ನಮೂದಿಸಿರುವ ವಿವರಗಳಲ್ಲಿನ ಯಾವುದೇ ಬದಲಾವಣೆಯನ್ನು 7 ದಿನಗಳೊಳಗೆ ಫಿನ್ಸಿಫ್ರೆಂಡ್ಸ್‌ಗೆ ತಿಳಿಸುವುದಾಗಿ ಸಾಲಗಾರರು ಕೈಗೊಳ್ಳುತ್ತಾರೆ. |
| **2.6** | The Borrower agrees, consents and permits FINCFRIENDS to disclose to the Borrower's family members (i.e. parents, spouse, children, sisters and brothers) or other persons whose details have been provided by the Borrower from time to time, all necessary or relevant particulars/ information relating to the Personal Loan and the Borrower for any purpose required by FINCFRIENDS. | **2.6** | ಫಿನ್ಸಿಫ್ರೆಂಡ್ಸ್‌ಗೆ ಅಗತ್ಯವಾದ ಯಾವುದೇ ಉದ್ದೇಶಕ್ಕೆ ವೈಯಕ್ತಿಕ ಸಾಲ ಮತ್ತು ಸಾಲಗಾರರಿಗೆ ಸಂಬಂಧಿಸಿದ ಎಲ್ಲ ಅಗತ್ಯ ಅಥವಾ ಸಂಬಂಧಿತ ವಿವರಗಳು / ಮಾಹಿತಿಯನ್ನು ಸಾಲಗಾರರ ಕುಟುಂಬ ಸದಸ್ಯರಿಗೆ (ಅಂದರೆ, ಪೋಷಕರು, ಸಂಗಾತಿ, ಮಕ್ಕಳು, ಸೋದರ ಮತ್ತು ಸೋದರಿಯರಿಗೆ) ಮತ್ತು ಯಾರ ವಿವರಗಳು ಕಾಲಕಾಲಕ್ಕೆ ಸಾಲಗಾರರಿಂದ ಒದಗಿಸಲ್ಪಟ್ಟಿವೆಯೋ ಆ ಇತರ ವ್ಯಕ್ತಿಗಳಿಗೆ ಬಹಿರಂಗಪಡಿಸಲು ಸಾಲಗಾರರು ಒಪ್ಪಿ, ಸಮ್ಮತಿಸಿ, ಫಿನ್ಸಿಫ್ರೆಂಡ್ಸ್ ಅನ್ನು ಅನುಮತಿಸುತ್ತಾರೆ. |
| **2.7** | The Borrower acknowledges that FINCFRIENDS shall require his true and complete, personal, demographic, family related, business, credit and financial information/ data (hereinafter "**Customer Data**"). The Borrower confirms that he understands that FINCFRIENDS has adopted and implemented Privacy Policy (available on official website of FINCFRIENDS) which describes the scenarios under which Customer Data may be dealt with by FINCFRIENDS & Service Provider(s) as defined in the Privacy Policy of FINCFRIENDS. Such Customer Data may be shared with, and/ or obtained from FINCFRIENDS & Service Provider(s). The Borrower hereby authorises FINCFRIENDS & Service Provider(s) that they may use/ share the Customer Data for the purposes mentioned in the Privacy Policy of FINCFRIENDS from time to time without seeking prior consent of the Borrower. | **2.7** | 2.7 ತಮ್ಮ ನಿಜವಾದ ಮತ್ತು ಸಂಪೂರ್ಣವಾದ, ವೈಯಕ್ತಿಕ, ಜನಸಂಖ್ಯಾತ್ಮಕ, ಕುಟುಂಬ ಸಂಬಂಧಿತ, ವ್ಯವಹಾರ, ಸಾಲ ಮತ್ತು ಆರ್ಥಿಕ ಮಾಹಿತಿ/ದತ್ತಾಂಶವು (ಇಲ್ಲಿಂದಮುಂದೆ "**ಗ್ರಾಹಕ ದತ್ತಾಂಶ**") ಫಿನ್ಸಿಫ್ರೆಂಡ್ಸ್‌ಗೆ ಬೇಕಿರುತ್ತದೆ ಎಂದು ಸಾಲಗಾರರು ಅಂಗೀಕರಿಸುತ್ತಾರೆ. ಫಿನ್ಸಿಫ್ರೆಂಡ್ಸ್‌ನ ಖಾಸಗಿ ನೀತಿಯಲ್ಲಿ ವ್ಯಾಖ್ಯಾನಿಸಿರುವಂತೆ ಫಿನ್ಸಿಫ್ರೆಂಡ್ಸ್ ಮತ್ತು ಸೇವಾ ಪೂರೈಕೆದಾರರಿಂದ ಗ್ರಾಹಕ ದತ್ತಾಂಶವು ಯಾವುದರಡಿಯಲ್ಲಿ ನಿರ್ವಹಿಸಲ್ಪಡುತ್ತದೆಯೋ ಆ ಸನ್ನಿವೇಶಗಳನ್ನು ವಿವರಿಸುವ ಖಾಸಗಿ ನೀತಿಯನ್ನು (ಫಿನ್ಸಿಫ್ರೆಂಡ್ಸ್‌ನ ಆಧಿಕೃತ ವೆಬ್‌ಸೈಟಿನಲ್ಲಿ ಲಭ್ಯವಿದೆ) ಫಿನ್ಸಿಫ್ರೆಂಡ್ಸ್ ಅಳವಡಿಸಿಕೊಂಡು, ಅನುಷ್ಠಾನಗೊಳಿಸಿದೆ ಎಂಬುದನ್ನು ತಾವು ತಿಳಿದುಕೊಂಡಿದ್ದಾರೆ ಎಂದು ಸಾಲಗಾರರು ಧೃಢೀಕರಿಸುತ್ತಾರೆ. ಇಂಥ ಗ್ರಾಹಕ ದತ್ತಾಂಶವು ಫಿನ್ಸಿಫ್ರೆಂಡ್ಸ್ ಮತ್ತು ಸೇವಾ ಪೂರೈಕೆದಾರರೊಂದಿಗೆ ಹಂಚಿಕೊಳ್ಳಲ್ಪಡಬಹುದು ಮತ್ತು/ಅಥವಾ ಫಿನ್ಸಿಫ್ರೆಂಡ್ಸ್ ಮತ್ತು ಸೇವಾ ಪೂರೈಕೆದಾರರಿಂದ ಪಡೆದುಕೊಳ್ಳಲ್ಪಡಬಹುದು. ಸಾಲಗಾರರ ಪೂರ್ವ ಸಮ್ಮತಿಯನ್ನು ಕೋರದೇ ಕಾಲಕಾಲಕ್ಕೆ ಫಿನ್ಸಿಫ್ರೆಂಡ್ಸ್‌ನ ಖಾಸಗಿ ನೀತಿಯಲ್ಲಿ ನಮೂದಿಸಿರುವ ಉದ್ದೇಶಗಳಿಗೆ ಗ್ರಾಹಕ ದತ್ತಾಂಶವನ್ನು ಫಿನ್ಸಿಫ್ರೆಂಡ್ಸ್ ಮತ್ತು ಸೇವಾ ಪೂರೈಕೆದಾರರು ಬಳಸಬಹುದು/ಹಂಚಿಕೊಳ್ಳಬಹುದು ಎಂದು |

| | | | |
|---|---|---|---|
| | | | ಸಾಲಗಾರರು ಈಮೂಲಕ ಅವರಿಗೆ ಅಧಿಕಾರ ನೀಡುತ್ತಾರೆ. |
| **2.8** | By giving the consents, the Borrower confirms that by receiving Customer Data, FINCFRIENDS & Service Provider(s) do not violate privacy and other rights of any third person. Borrower further confirms that he shall have no concern or claims of any nature whatsoever on FINCFRIENDS & Service Provider(s) for carrying out any of the acts and functions mentioned herein and this waiver and permissions are granted for all statutes, rules and regulations, including but not limited to the privacy law provisions under the Information Technology Act, 2000 and any other privacy rules, as applicable. | **2.8** | 2.8 ಈ ಸಮ್ಮತಿಗಳನ್ನು ನೀಡುವ ಮೂಲಕ, ಗ್ರಾಹಕ ದತ್ತಾಂಶವನ್ನು ಸ್ವೀಕರಿಸುವ ಮೂಲಕ ಯಾವುದೇ ತೃತೀಯ ವ್ಯಕ್ತಿಯ ಖಾಸಗಿತನ ಮತ್ತು ಇತರ ಹಕ್ಕುಗಳನ್ನು ಫಿನ್ಸಿಫ್ರೆಂಡ್ಸ್ ಮತ್ತು ಸೇವಾ ಪೂರೈಕೆದಾರರು ಉಲ್ಲಂಘಿಸುವುದಿಲ್ಲ ಎಂದು ಸಾಲಗಾರರು ಧೃಢೀಕರಿಸುತ್ತಾರೆ. ಇಲ್ಲಿ ನಮೂದಿಸಿರುವ ಯಾವುದೇ ಕೆಲಸಗಳು ಮತ್ತು ಕಾರ್ಯಗಳನ್ನು ನಡೆಸುವುದಕ್ಕೆ ಫಿನ್ಸಿಫ್ರೆಂಡ್ಸ್ ಮತ್ತು ಸೇವಾ ಪೂರೈಕೆದಾರರ ಮೇಲೆ ಯಾವುದೇ ಸ್ವರೂಪದ ಯಾವುದೇ ಕಳಕಳಿ ಅಥವಾ ದಾವೆಗಳನ್ನು ತಾವು ಹೊಂದಿರತಕ್ಕದ್ದಲ್ಲ ಮತ್ತು ಈ ಮನ್ನಿಸುವಿಕೆ ಹಾಗೂ ಅನುಮತಿಗಳು, ಅನ್ವಯವಾಗುವಂತೆ, 2000 ದ ಮಾಹಿತಿ ತಂತ್ರಜ್ಞಾನ ಕಾಯ್ದೆಯಡಿಯಲ್ಲಿನ ಖಾಸಗಿತನದ ಕಾನೂನಿನ ಉಪಬಂಧಗಳನ್ನು ಅವುಗಳಿಗಷ್ಟೇ ಸೀಮಿತವಾಗದಂತೆ ಒಳಗೊಂಡು, ಎಲ್ಲ ಶಾಸನಗಳು, ನಿಯಮಗಳು ಮತ್ತು ವಿನಿಯಮಗಳಿಗೆ ಮಂಜೂರು ಮಾಡಲ್ಪಟ್ಟಿವೆ ಎಂದು ಸಾಲಗಾರರು ಮುಂದುವರೆದು ಧೃಢೀಕರಿಸುತ್ತಾರೆ. |
| **2.9** | The Borrower further confirms and gives specific consent to FINCFRIENDS for disclosing/ submitting the 'financial information' as defined in Section 3 (13) of the Insolvency and Bankruptcy Code, 2016 (hereinafter the "**Code**") read with the relevant rules/ regulations framed under the Code, as amended and in force from time to time and as specified thereunder from time to time, in respect of the Credit/ Financial facilities availed from FINCFRIENDS, from time to time, to any "Information Utility" (hereinafter "**IU**") as defined in Section 3 (21) of the Code, in accordance with the relevant regulations framed under the Code, and directions issued by Reserve Bank of India from time to time and hereby specifically confirm to promptly authenticate the financial information submitted by FINCFRIENDS, as and when requested by the concerned IU. | **2.9** | 2016 ರ ಋಣಗ್ರಸ್ತತೆ ಮತ್ತು ದಿವಾಳಿತನ ಸಂಹಿತೆ (ಇಲ್ಲಿಂದಮುಂದೆ "ಸಂಹಿತೆ"), ಸಂಹಿತೆಯಡಿಯಲ್ಲಿ ರೂಪಿಸಿದ ಸಂಬಂಧಿತ ನಿಯಮಗಳು/ವಿನಿಯಮಗಳ ಜೊತೆಯಲ್ಲಿ ಓದಿದ ಸಂಹಿತೆಯ ಕಲಮ್ 3 (13) ರಲ್ಲಿ ವ್ಯಾಖ್ಯಾನಿಸಿರುವಂತೆ ಹಾಗೂ ಕಾಲಕಾಲಕ್ಕೆ ತಿದ್ದುಪಡಿ ಮಾಡಲ್ಪಟ್ಟು, ಜಾರಿಯಲ್ಲಿರುವಂತೆ ಮತ್ತು ಕಾಲಕಾಲಕ್ಕೆ ಅದರಡಿಯಲ್ಲಿ ನಿರ್ದಿಷ್ಟಪಡಿಸಿದಂತೆ, ಕಾಲಕಾಲಕ್ಕೆ, ಫಿನ್ಸಿಫ್ರೆಂಡ್ಸ್‌ದಿಂದ ಪಡೆದುಕೊಳ್ಳಲ್ಪಟ್ಟ ಕ್ರೆಡಿಟ್ /ಆರ್ಥಿಕ ಸೌಲಭ್ಯಗಳ ಸಂಬಂಧದಲ್ಲಿನ 'ಆರ್ಥಿಕ ಮಾಹಿತಿ' ಯನ್ನು, ಸಂಹಿತೆಯಡಿಯಲ್ಲಿ ರೂಪಿಸಿರುವ ಸಂಬಂಧಿತ ವಿನಿಯಮಗಳು, ಮತ್ತು ಕಾಲಕಾಲಕ್ಕೆ ಭಾರತೀಯ ರಿಜರ್ವ್ ಬ್ಯಾಂಕಿನಿಂದ ಹೊರಡಿಸಲ್ಪಟ್ಟ ನಿರ್ದೇಶನಗಳಿಗೆ ಅನುಗುಣವಾಗಿ, ಸಂಹಿತೆಯ ಕಲಮ್ 3 (21) ರಲ್ಲಿ ವ್ಯಾಖ್ಯಾನಿಸಲ್ಪಟ್ಟಿರುವಂತೆ ಯಾವುದೇ "ಇನ್ಫಾರ್ಮೇಶನ್ ಯುಟಿಲಿಟಿ" (ಇಲ್ಲಿಂದಮುಂದೆ "ಐಯು") ಗೆ ಬಹಿರಂಗಪಡಿಸುವಿಕೆ/ಸಲ್ಲಿಸುವಿಕೆಯನ್ನು ಸಾಲಗಾರರು ಮುಂದುವರೆದು ಧೃಢೀಕರಿಸಿ, ಅದಕ್ಕೆ ನಿರ್ದಿಷ್ಟ ಸಮ್ಮತಿಯನ್ನು ಫಿನ್ಸಿಫ್ರೆಂಡ್ಸ್‌ಗೆ ನೀಡುತ್ತಾರೆ ಮತ್ತು ಸಂಬಂಧಿತ 'ಐಯು' ದಿಂದ ಕೋರಲ್ಪಟ್ಟಾಗಲೆಲ್ಲ ಫಿನ್ಸಿಫ್ರೆಂಡ್ಸ್‌ದಿಂದ ಸಲ್ಲಿಸಲ್ಪಟ್ಟ ಆರ್ಥಿಕ ಮಾಹಿತಿಯನ್ನು ತಡಮಾಡದೇ ಪ್ರಮಾಣೀಕರಿಸಲು ಈಮೂಲಕ ನಿರ್ದಿಷ್ಟವಾಗಿ ಧೃಢೀಕರಿಸುತ್ತಾರೆ. |
| **2.10** | The Borrower confirms that he would like to know and avail various offers or promotional schemes on loan, insurance products (including life, health or general insurance) or other financial services provided by FINCFRIENDS & Service Provider(s) from time to time and hereby authorises FINCFRIENDS & Service Provider(s) to contact and offer him such schemes through Communication Modes. | **2.10** | 2.10 ಕಾಲಕಾಲಕ್ಕೆ ಫಿನ್ಸಿಫ್ರೆಂಡ್ಸ್ ಮತ್ತು ಸೇವಾ ಪೂರೈಕೆದಾರರಿಂದ ಒದಗಿಸಲ್ಪಡುವ ಸಾಲ, ವಿಮಾ ಉತ್ಪನ್ನಗಳು (ಜೀವ, ಆರೋಗ್ಯ ಅಥವಾ ಸಾಮಾನ್ಯ ವಿಮೆಯನ್ನೂ ಒಳಗೊಂಡು) ಅಥವಾ ಇತರ ಆರ್ಥಿಕ ಸೇವೆಗಳ ಮೇಲಿನ ಹಲವಾರು ಆಫರ್‌ಗಳು ಅಥವಾ ಪ್ರೊಮೋಶನಲ್ ಸ್ಕೀಮ್‌ಗಳನ್ನು ತಿಳಿದುಕೊಳ್ಳಲು ಹಾಗೂ ಪಡೆದುಕೊಳ್ಳಲು ತಾವು ಬಯಸುತ್ತಾರೆ ಎಂದು ಸಾಲಗಾರರು ಧೃಢೀಕರಿಸುತ್ತಾರೆ ಮತ್ತು ಸಂವಹನ ಕ್ರಮಗಳ ಮುಖಾಂತರ ತಮ್ಮನ್ನು |

| | | | |
|---|---|---|---|
| | The Borrower hereby consents that FINCFRIENDS and/ or his authorised representatives may communicate with the Borrower either by phone calls, SMS, WhatsApp, electronic mails or through any other mode of communication available for the purpose of discussing the current status of his/ her loan(s) or reminder/ collection of any dues in respect of any loan or for any matter related to the loan(s). For this purpose, Borrower hereby grants permission to FINCFRIENDS to contact him any time between 0800 hours to 1900 hours from Monday to Sunday. Such authorisation in favour of FINCFRIENDS & Service Provider(s) shall continue to be valid even if he/ she ceased to be the customer/ borrower/ client of FINCFRIENDS at any point of time. | | ಸಂಪರ್ಕಿಸಿ, ಇಂಥ ಸ್ಕೀಮ್‌ಗಳನ್ನು ಪ್ರಸ್ತಾಪಿಸಲು ಫಿನ್ಸಿಫ್ರೆಂಡ್ಸ್ ಮತ್ತು ಸೇವಾ ಪೂರೈಕೆದಾರರಿಗೆ ಈಮೂಲಕ ಅಧಿಕಾರ ನೀಡುತ್ತಾರೆ. ತಮ್ಮ ಸಾಲದ(ಗಳ) ಪ್ರಸ್ತುತ ಸ್ಥಿತಿಯನ್ನು ಚರ್ಚಿಸುವ ಉದ್ದೇಶಕ್ಕಾಗಿ ಅಥವಾ ಸಾಲದ ಸಂಬಂಧದಲ್ಲಿನ ಯಾವುದೇ ಬಾಕಿಗಳನ್ನು ನೆನಪಿಸುವ / ಸಂಗ್ರಹಿಸಿಕೊಳ್ಳುವ ಉದ್ದೇಶಕ್ಕಾಗಿ ಅಥವಾ ಸಾಲಕ್ಕೆ(ಗಳಿಗೆ) ಸಂಬಂಧಿಸಿದ ಬೇರಾವುದೇ ಸಂಗತಿಯ ಉದ್ದೇಶಕ್ಕಾಗಿ ಲಭ್ಯವಿರುವ ದೂರವಾಣಿ ಕರೆಗಳು, ಎಸ್‌ಎಮ್‌ಎಸ್, ವಾಟ್ಸ್‌ಆ್ಯಪ್, ಇಲೆಕ್ಟ್ರಾನಿಕ್ ಮೇಲ್ ಮೂಲಕವಾಗಲಿ ಅಥವಾ ಬೇರಾವುದೇ ಸಂವಹನದ ಕ್ರಮದ ಮೂಲಕವಾಗಲಿ ಫಿನ್ಸಿಫ್ರೆಂಡ್ಸ್ ಮತ್ತು/ಅಥವಾ ಅವರ ಅಧೀಕೃತ ಪ್ರತಿನಿಧಿಗಳು ಸಾಲಗಾರರೊಂದಿಗೆ ಸಂವಹನ ಮಾಡಬಹುದು ಎಂಬುದಕ್ಕೆ ಸಾಲಗಾರರು ಈಮೂಲಕ ಸಮ್ಮತಿಸುತ್ತಾರೆ. ಈ ಉದ್ದೇಶಕ್ಕೆ, ಸೋಮವಾರದಿಂದ ಭಾನುವಾರದವರೆಗೆ 0800 ಗಂಟೆಗಳಿಂದ 1900 ಗಂಟೆಗಳವರೆಗಿನ ನಡುವಿನ ಯಾವುದೇ ಸಮಯದಲ್ಲಿ ತಮ್ಮನ್ನು ಸಂಪರ್ಕಿಸುವ ಅನುಮತಿಯನ್ನು ಫಿನ್ಸಿಫ್ರೆಂಡ್ಸ್‌ಗೆ ಸಾಲಗಾರರು ಈಮೂಲಕ ಮಂಜೂರು ಮಾಡುತ್ತಾರೆ. ಸಾಲಗಾರರು ಯಾವುದೇ ಸಮಯದಲ್ಲಿ ಫಿನ್ಸಿಫ್ರೆಂಡ್ಸ್‌ನ ಗ್ರಾಹಕರು/ಸಾಲಗಾರರು/ಕಕ್ಷಿದಾರರು ಆಗಿರುವುದು ನಿಂತರೂ ಸಹ ಫಿನ್ಸಿಫ್ರೆಂಡ್ಸ್ ಮತ್ತು ಸೇವಾ ಪೂರೈಕೆದಾರರ ಹೆಸರಿನಲ್ಲಿನ ಇಂಥ ಅಧಿಕಾರ ನೀಡಿಕೆಯು ಮಾನ್ಯವಾಗಿರುವುದು ಮುಂದುವರೆಯತಕ್ಕದ್ದು. |
| **3.** | **PERSONAL LOAN** | **3.** | **ವೈಯಕ್ತಿಕ ಸಾಲ** |
| **3.1** | Based on the Loan Application submitted by the Borrower declaring to abide by this Loan GTC, FINCFRIENDS may approve and assign the maximum Perosonal Loan as per Loan Application to the Borrower. The Personal Loan upon approval shall be mentioned in the Sanction Letter along with the Tenure and other detail of the Personal Loan to be available in the manner provided in this Loan GTC. | **3.1** | ಸಾಲದ ಈ ಸಾಷನಿಗಳನ್ನು ಪಾಲಿಸುವುದಾಗಿ ಘೋಷಿಸುವ, ಸಾಲಗಾರರಿಂದ ಸಲ್ಲಿಸಲ್ಪಟ್ಟಿರುವ ಸಾಲದ ಅರ್ಜಿಯ ಮೇಲೆ ಆಧರಿತವಾಗಿ, ಸಾಲದ ಅರ್ಜಿಗೆ ಅನುಗುಣವಾಗಿ ಸಾಲಗಾರರಿಗೆ ಗರಿಷ್ಠ ವೈಯಕ್ತಿಕ ಸಾಲವನ್ನು ಫಿನ್ಸಿಫ್ರೆಂಡ್ಸ್ ಅನುಮೋದಿಸಿ, ವಹಿಸಬಹುದು. ಅನುಮೋದಿಸಲ್ಪಟ್ಟ ನಂತರ ವೈಯಕ್ತಿಕ ಸಾಲವು, ಲಭ್ಯವಾಗಬೇಕಿರುವ ಸದರಿ ವೈಯಕ್ತಿಕ ಸಾಲದ ಅವಧಿ ಮತ್ತು ಇತರ ವಿವರಗಳ ಜೊತೆಯಲ್ಲಿ ಸಾಲದ ಈ ಸಾಷನಿಗಳಲ್ಲಿ ಒದಗಿಸಿರುವ ರೀತಿಯಲ್ಲಿ ಮಂಜೂರಾತಿ ಪತ್ರದಲ್ಲಿ ನಮೂದಿಸಲ್ಪಡತಕ್ಕದ್ದು. |
| **3.2** | Personal Loan once approved, may be disbursed to the Borrower in the Registered Bank Account of the Borrower. | **3.2** | ಅನುಮೋದಿಸಲ್ಪಟ್ಟ ನಂತರ ವೈಯಕ್ತಿಕ ಸಾಲವು ಸಾಲಗಾರರ ನೋಂದಾಯಿತ ಬ್ಯಾಂಕ್ ಖಾತೆಯಲ್ಲಿ ಸಾಲಗಾರರಿಗೆ ವಿತರಿಸಲ್ಪಡಬಹುದು. |
| **4.** | **UTILISATION OF LOAN** | **4.** | **ಸಾಲದ ವಿನಿಯೋಗ** |

| | | | |
|---|---|---|---|
| **4.1** | The Borrower shall continue to pay the Monthly Instalments or Outstanding Balance, as the case may be, no later than on the respective Due Dates or Maturity Due Date (whichever is earlier) regardless of whether the purpose for which the Personal Loan is obtained could not be achieved. The Borrower, in case of purchase of any product or servcie utilising the Perosnal Loan, accepts the entire risk for non-performance, non-delivery, breach or supply of inferior or damaged product or service and any other risk related to the product or service. FINCFRIENDS is not liable to the Borrower for any liability, claim, loss or expense of any kind caused directly or indirectly by or in relation to such product or service. Any dispute or difference whatsoever relating to non-performance, non-delivery, breach or supply of inferior or damaged product/ service shall not entitle the Borrower to withhold and/ or delay any payment to FINCFRIENDS. | **4.1** | ವೈಯಕ್ತಿಕ ಸಾಲವನ್ನು ಯಾವುದಕ್ಕೆ ಪಡೆದುಕೊಳ್ಳಲಾಗಿತ್ತೋ ಆ ಉದ್ದೇಶವನ್ನು ಸಾಧಿಸಲು ಸಾಧ್ಯವಾಯಿತೋ ಇಲ್ಲವೋ ಎಂಬುದಕ್ಕೆ ಸಂಬಂಧವಿಲ್ಲದಂತೆ ಆಯಾ ಕೊನೆಯ ದಿನಾಂಕಗಳು ಅಥವಾ ಪಕ್ವತೆಯ ಕೊನೆಯ ದಿನಾಂಕ (ಯಾವುದು ಮೊದಲೋ ಆ ದಿನಾಂಕ) ವನ್ನು ಮೀರದೇ, ಸಂದರ್ಭಾನುಸಾರವಾಗಿ, ಮಾಸಿಕ ಕಂತುಗಳು ಅಥವಾ ಬಾಕಿ ಉಳಿಕೆಮೊತ್ತವನ್ನು ಪಾವತಿಸುವುದನ್ನು ಸಾಲಗಾರರು ಮುಂದುವರೆಸತಕ್ಕದ್ದು. ಯಾವುದೇ ಉತ್ಪನ್ನ ಅಥವಾ ಸೇವೆಯನ್ನು ಖರೀದಿಸುವುದಕ್ಕಾಗಿ ವೈಯಕ್ತಿಕ ಸಾಲವನ್ನು ವಿನಿಯೋಗಿಸಿರುವ ಸಂದರ್ಭದಲ್ಲಿ, ಉತ್ಪನ್ನ/ಸೇವೆಯ ಕಾರ್ಯಪ್ರದರ್ಶನವಿಲ್ಲದಿರುವಿಕೆ, ತಲುಪಿಸಲ್ಪಡದಿರುವಿಕೆ, ಉಲ್ಲಂಘಿಸಲ್ಪಡುವಿಕೆ ಅಥವಾ ಕಳಪೆ ಅಥವಾ ಹಾನಿಗೀಡಾದ ಉತ್ಪನ್ನ ಅಥವಾ ಸೇವೆಯು ಪೂರೈಸಲ್ಪಡುವ ಸಂಪೂರ್ಣ ಅಪಾಯವನ್ನು ಅಥವಾ ಆ ಉತ್ಪನ್ನ ಅಥವಾ ಸೇವೆಗೆ ಸಂಬಂಧಿಸಿದ ಬೇರಾವುದೇ ಅಪಾಯವನ್ನು ಸಾಲಗಾರರು ಅಂಗೀಕರಿಸುತ್ತಾರೆ. ಅಂಥ ಉತ್ಪನ್ನ ಅಥವಾ ಸೇವೆಯಿಂದ ಅಥವಾ ಅದರ ಸಂಬಂಧದಲ್ಲಿ ಸಾಲಗಾರರಿಗೆ ಪರೋಕ್ಷವಾಗಿ ಅಥವಾ ಅಪರೋಕ್ಷವಾಗಿ ಉಂಟಾದ ಯಾವುದೇ ರೀತಿಯ ಯಾವುದೇ ಬಾಧ್ಯತೆ, ದಾವೆ, ನಷ್ಟ ಅಥವಾ ಖರ್ಚಿಗೆ ಫಿನ್ಸಿಫ್ರೆಂಡ್ಸ್ ಬಾಧ್ಯಸ್ಥವಾಗಿರುವುದಿಲ್ಲ. ಉತ್ಪನ್ನ/ಸೇವೆಯು ಕಾರ್ಯಪ್ರದರ್ಶನವಿಲ್ಲದಿರುವಿಕೆ, ತಲುಪಿಸಲ್ಪಡದಿರುವಿಕೆ, ಉಲ್ಲಂಘಿಸಲ್ಪಡುವಿಕೆ ಅಥವಾ ಕಳಪೆ ಅಥವಾ ಹಾನಿಗೀಡಾದ ಉತ್ಪನ್ನ ಅಥವಾ ಸೇವೆಯು ಪೂರೈಸಲ್ಪಡುವಿಕೆಗೆ ಸಂಬಂಧಿಸಿದ ಯಾವುದೇ ತಕರಾರು ಅಥವಾ ಭಿನ್ನಾಭಿಪ್ರಾಯವು ಫಿನ್ಸಿಫ್ರೆಂಡ್ಸ್‌ಗೆ ಮಾಡಬೇಕಿರುವ ಯಾವುದೇ ಪಾವತಿಯನ್ನು ತಡೆಹಿಡಿಯಲು ಮತ್ತು/ಅಥವಾ ವಿಳಂಬಗೊಳಿಸಲು ಸಾಲಗಾರರನ್ನು ಹಕ್ಕುದಾರರಾಗಿಸತಕ್ಕದ್ದಲ್ಲ. |
| **5.** | **RATE OF INTEREST, FEES AND OTHER CHARGES** | **5.** | **ಬಡ್ಡಿಯ ದರ, ಶುಲ್ಕಗಳು ಮತ್ತು ಇತರ ಆಕರಣೆಗಳು** |
| **5.1** | During the Tenure of the Personal Loan and for the period thereafter if the Personal Loan is not repaid in full by the Borrower, the annualised rate of Interest as mentioned in the Sanction Letter (or as subsequently notified to the Borrower in line with this Loan GTC) shall be charged on daily reducing balance by taking a base of 360 (three hundred and sixty) days per year (hereinafter referred as "**Annualised Rate of Interest**"). The | **5.1** | ವೈಯಕ್ತಿಕ ಸಾಲದ ಅವಧಿಯಲ್ಲಿ ಮತ್ತು ತದನಂತರದ ಅವಧಿಗೆ ವೈಯಕ್ತಿಕ ಸಾಲವು ಸಾಲಗಾರರಿಂದ ಸಂಪೂರ್ಣವಾಗಿ ಮರುಪಾವತಿಸಲ್ಪಡದಿದ್ದಲ್ಲಿ, ಮಂಜೂರಾತಿ ಪತ್ರದಲ್ಲಿ ನಮೂದಿಸಿರುವಂತೆ (ಅಥವಾ ಸಾಲದ ಈ ಸಾಷನಿಗಳೊಂದಿಗಿನ ಹೊಂದಾಣಿಕೆಯಲ್ಲಿ ತದನಂತರದಲ್ಲಿ ಸಾಲಗಾರರಿಗೆ ಸೂಚಿತಗೊಳಿಸಲ್ಪಟ್ಟಂತೆ) ಪ್ರತಿ ವರ್ಷಕ್ಕೆ 360 (ಮುನ್ನೂರ ಅರವತ್ತು) ದಿನಗಳ ಆಧಾರವೊಂದನ್ನು ತೆಗೆದುಕೊಳ್ಳುವ ಮೂಲಕ ದೈನಂದಿನವಾಗಿ ಕ್ಷೀಣಿಸುವ ಉಳಿಕೆಮೊತ್ತದ ಮೇಲೆ ವಾರ್ಷೀಕರಿಸಿದ ಬಡ್ಡಿ ದರವು (ಇಲ್ಲಿಂದಮುಂದೆ "ವಾರ್ಷೀಕರಿಸಿದ ಬಡ್ಡಿಯ ದರ" ಎಂಬುದಾಗಿ ಉಲ್ಲೇಖಿಸಲ್ಪಡುತ್ತದೆ) ಆಕರಿಸಲ್ಪಡತಕ್ಕದ್ದು. ವೈಯಕ್ತಿಕ ಸಾಲದ ದೈನಂದಿನವಾಗಿ ಮುಕ್ತಾಯ ಉಳಿಕೆಮೊತ್ತದ ಮೇಲೆ |

| | | | |
|---|---|---|---|
